॥ ಓಂ ॥

॥ ಶ್ರೀವೀತರಾಗಾಯ ನಮಃ ॥

ಶ್ರೀಮನ್ನೇಮಿಚಂದ್ರ ಸಿದ್ಧಾಂತಿದೇವವಿರಚಿತ

ದ್ರವ್ಯಸಂಗ್ರಹಃ

ಈ ಗ್ರಂಥವನ್ನು

ಮ. ರಾ. ಅಣ್ಣಪ್ಪ ಚೌಗುಲೆ ವಕೀಲ,

ಬೆಳಗಾವಿ

ಇವರು ತಮ್ಮ

"ಶ್ರೀಮಹಾವೀರ" ಮುದ್ರಣಾಲಯದಲ್ಲಿ ಮುದ್ರಿಸಿ

ಪ್ರಸಿದ್ಧ ಮಾಡಿದರು.

ಇಸವೀ ಸನ್ನ ೧೯೧೦] [ವೀರಸಂವತ ೨೪೩೬.

ಕ್ರಯ ೩ ಆಣೆ.

[illegible]

॥ ಓಂ ॥

॥ ಶ್ರೀವೀತರಾಗಾಯ ನಮಃ ॥

ಶ್ರೀಮನ್ನೇಮಿಚಂದ್ರ ಸಿದ್ಧಾಂತಿದೇವವಿರಚಿತ

ದ್ರವ್ಯಸಂಗ್ರಹಃ

ಈ ಗ್ರಂಥವನ್ನು

ಮ. ರಾ. ಅಣ್ಣಪ್ಪಾ ಚೌಗುಲೆ ವಕೀಲ,

ಬೆಳಗಾವಿ

ಇವರು ತಮ್ಮ

"ಶ್ರೀಮಹಾವೀರ" ಮುದ್ರಣಾಲಯದಲ್ಲಿ ಮುದ್ರಿಸಿ

ಪ್ರಸಿದ್ಧ ಮಾಡಿದರು.

ಇಸವೀ ಸನ್ನ ೧೯೧೦.] [ವೀರಸಂವತ ೨೪೩೬.

ಕ್ರಯ ೩ ಆಣೆ.

ಪ್ರಸ್ತಾವನೆಯು.

ಶ್ರೀನೇಮಿಚಂದ್ರ ಸಿದ್ಧಾಂತಚಕ್ರವರ್ತಿಯವರು ಈ ದ್ರವ್ಯಸಂಗ್ರಹವನ್ನು ರಚಿಸಿದ್ದಾರೆ. ಶ್ರೀನೇಮಿಚಂದ್ರರು ಆಗಮಪಾರಂಗತರಿದ್ದದರಿಂದ ಅವರಿಗೆ " ಸಿದ್ಧಾಂತಚಕ್ರವರ್ತಿ " ಎಂಬ ಬಿರದು ದೊರೆಯಿತು. ದಕ್ಷಿಣ ಮಧುರೆಯಲ್ಲಿ ಶಾಲಿವಾಹನಶಕ ೬೦೦ ರ ಸುಮಾರಕ್ಕೆ ರಾಜಮಲ್ಲನೆಂಬ ಅರಸನು ರಾಜ್ಯವಾಳುತ್ತಿದ್ದನು. ಆತನ ಮುಖ್ಯ ಪ್ರಧಾನನಾದ ಚಾಮುಂಡರಾಯನು ಬೆಳಗುಳನಗರದಲ್ಲಿ ಶ್ರೀಗೋಮಟೇಶ್ವರನ ಪ್ರತಿಷ್ಠೆಯನ್ನು ಶ್ರೀನೇಮಿಚಂದ್ರದೇವನಿಂದ ಮಾಡಿಸಿದನೆಂದು ಶಿಲಾಲೇಖಗಳ ಮೇಲಿಂದಲೂ, ಪುರಾಣಗಳ ಮೇಲಿಂದಲೂ ಕಂಡುಬರುತ್ತದೆ. ಇದಕ್ಕೆ ಪ್ರಮಾಣವು:—

ಸಿದ್ಧಾಂತಾಂಭೋಧಿಚಂದ್ರಃ ಪ್ರಣುತಪರಮದೇಶೀಗಣಾಂಭೋಧಿಚಂದ್ರಃ ।
ಸ್ಯಾದ್ವಾದಾಂಭೋಧಿಚಂದ್ರಃ ಪ್ರಕಟಿತನಯನಿಕ್ಷೇಪವಾರಾಶಿಚಂದ್ರಃ ॥
ಏನಶ್ಚಕ್ರೌಘಚಂದ್ರಃ ಪದನುತಕಮಲವ್ರಾತಚಂದ್ರಃ ಪ್ರಶಸ್ತೋ ।
ಜೀಯಾಜ್ಜ್ಞಾನಾಬ್ಧಿಚಂದ್ರೋ ಮುನಿಪಕುಲವಿಯಚ್ಚಂದ್ರಮಾ ನೇಮಿ-
ಚಂದ್ರಃ ॥೬೨॥

ಸಿದ್ಧಾಂತಾಮೃತಸಾಗರಂ ಸ್ವಮತಿಮಂಥಕ್ಷ್ಮಾಭೃದಾಲೋಡ್ಯ ಯೋ ।
ಲೇಭೇಭೀಷ್ಟಫಲಪ್ರದಾನಪಿ ಸದಾ ದೇಶೀಗಣಾಗ್ರೇಸರಃ ॥
ಶ್ರೀಮದ್ಗೋಮಟಲಬ್ಧಿಸಾರವಿಲಸತ್ತ್ರೈಲೋಕ್ಯಸಾರಾಮರ- ।
ಕ್ಷ್ಮಾಜಶ್ರೀಸುರಧೇನುಚಿಂತಿತಮಣೀನ್ ಶ್ರೀನೇಮಿಚಂದ್ರೋ ಮುನಿಃ ॥೬೩

ಕಲ್ಕ್ಯಬ್ದೇ ಷಟ್‌ಶತಾಖ್ಯೇ ವಿನುತವಿಭವಸಂವತ್ಸರೇ ಮಾಸಿ ಚೈತ್ರೇ ।
ಪಂಚಮ್ಯಾಂ ಶುಕ್ಲಪಕ್ಷೇ ದಿನಮಣಿದಿವಸೇ ಕುಂಭಲಗ್ನೇ ಸುಯೋಗೇ ॥
ಸೌಭಾಗ್ಯೇ ಮಸ್ತನಾಮ್ನಿ ಪ್ರಕಟಿತಭಗಣೇ ಸುಪ್ರಶಸ್ತಾಂ ಚಕಾರ ।
ಶ್ರೀಮಚ್ಚಾಮುಂಡರಾಜೋ ಬೆಲ್ಗುಲನಗರೇ ಗೋಮಟೇಶಪ್ರತಿಷ್ಠಾಮ್ ॥

(ಶ್ರೀಬಾಹುಬಲಿಚರಿತ್ರ) ಶ್ಲೋಕ ೬೨, ೬೩, ೫೫.

ಶ್ರೀನೇಮಿಚಂದ್ರದೇವರು ಗೋಮಟಸಾರ, ಪ್ರತಿಷ್ಠಾತಿಲಕ ಮುಂತಾದ ಹಲವು ಅನ್ಯ ಉತ್ತಮೋತ್ತಮವಾದ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀಗೋಮಟಸಾರವನ್ನು ಚಾಮುಂಡರಾಯನ ಪ್ರೇರಣೆಯಿಂದಲೇ ಆತನ ಸ್ವಾಧ್ಯಾಯದ ದೆಶೆಯಿಂದ ಶ್ರೀನೇಮಿಚಂದ್ರದೇವರು ರಚಿಸದರು. ದ್ರವ್ಯ ಸಂಗ್ರಹವು ಸಣ್ಣ ಗ್ರಂಥವಿದ್ದರೂ ಅದರ ಯೋಗ್ಯತೆಯು ಬಹಳೇ ದೊಡ್ಡದಿರುವದು. ಇದರಲ್ಲಿ ಷಡ್ದ್ರವ್ಯ ಮತ್ತು ನವಪದಾರ್ಥ ಇವುಗಳ ವರ್ಣನೆಯು ಬಹಳೇ ಉತ್ತಮರೀತಿಯಿಂದ ಮಾಡಲ್ಪಟ್ಟಿದ್ದು ಕಡೆಗೆ ಧ್ಯಾನದ ಮಹತ್ವವವು ಹೇಳಲ್ಪಟ್ಟದೆ.

ಈ ಗ್ರಂಥವನ್ನು ಸಂಸ್ಕೃತ ಟೀಕಾತ್ಮಕವಾದ ಬೃಹದ್ದ್ರವ್ಯಸಂಗ್ರಹವೆಂಬ ಗ್ರಂಥದ ಆಧಾರದಿಂದ ನಮ್ಮ ಕರ್ಣಾಟಕ ಜೈನಬಾಂಧವರ ಸ್ವಾಧ್ಯಾಯದ ದೆಶೆಯಿಂದ ನಾವು ತಯಾರಿಸಿ ಮುದ್ರಿಸಿದ್ದೇವೆ. ಪಂಡಿತರು ಇದರೊಳಗಿನ ದೋಷಗಳನ್ನು ತಿಳುಹಿಸಿದಲ್ಲಿ ಕೃತಜ್ಞತೆಯಿಂದ ಮುಂದಿನ ಆವೃತ್ತಿಯಲ್ಲಿ ಅವುಗಳನ್ನು ತಿದ್ದುವೆವು.

ಬೆಳಗಾವಿ,
ತಾ|| ೯।೭।೧೦.

A. P. Chaugule.

॥ ಓಂ ॥

ಶ್ರೀಮನ್ನೇಮಿಚಂದ್ರ ಸಿದ್ಧಾಂತಿದೇವವಿರಚಿತಃ

ದ್ರವ್ಯಸಂಗ್ರಹಃ

ಜೀವಮಜೀವಂ ದವ್ವಂ ಜಿಣವರವಸಹೇಣ ಜೇಣ ಣಿದ್ದಿಟ್ಠಂ ॥
ದೇವಿಂದವಿಂದವಂದಂ ವಂದೇ ತಂ ಸವ್ವದಾ ಸಿರಸಾ ॥ ೧ ॥

ಅರ್ಥಃ—ಜೀವಾಜೀವದ್ರವ್ಯಗಳ ಸ್ವರೂಪವನ್ನು ವರ್ಣಿಸಿದಂಥ ಮತ್ತು ಶತೇಂದ್ರರಿಂದ* ವಂದಿಸಲ್ಪಪಟ್ಟ ಜಿನೋತ್ತಮನಾದ ಶ್ರೀ ವೃಷಭಸ್ವಾಮಿಯನ್ನು ಯಾವಾಗಲೂ ನಾನು (ನೇಮಿಚಂದ್ರ ಸಿದ್ಧಾಂತಿ ಚಕ್ರವರ್ತಿಯು) ತಲೆಬಾಗಿಸಿ ವಂದಿಸುತ್ತೇನೆ.

ಜೀವೋ ಉವಓಗಮಓ ಅಮುತ್ತಿ ಕತ್ತಾ ಸದೇಹಪರಿಮಾಣೋ ॥
ಭೋತ್ತಾ ಸಂಸಾರತ್ಥೋ ಸಿದ್ಧೋ ಸೋ ವಿಸ್ಸಸೋಡ್ಢಗಈ ॥ ೨ ॥

ಅರ್ಥ:—(ಚೈತನ್ಯಲಕ್ಷಣವುಳ್ಳ) ಜೀವವು ಉಪಯೋಗಮಯುವಾಗಿದೆ. ಈ ಆತ್ಮನು ಅಮೂರ್ತನೂ ಶುಭಾಶುಭ ಕರ್ಮಗಳ ಕರ್ತೃವೂ ಇದ್ದು, ತನಗೆ ಪ್ರಾಪ್ತವಾದ ದೇಹದ ಪ್ರಮಾಣವುಳ್ಳವನಾಗಿರುತ್ತಾನೆ. ಅವನು ಕರ್ಮಗಳ ಶುಭಾಶುಭ ಫಲಗಳನ್ನು ಭೋಗಿಸುತ್ತಾನೆ. ಹಾಗು ಸಂಸಾರದಲ್ಲಿ ತ್ರಸ ಮತ್ತು ಸ್ಥಾವರ ಪರ್ಯಾಯುಗಳನ್ನು ಹೊಂದಿ, (ಎಲ್ಲ ಕರ್ಮಗಳು ನಷ್ಟವಾದ ಮೇಲೆ) ಮುಕ್ತನಾಗಿ ಸ್ವಾಭಾವಿಕವಾದ ಊರ್ಧ್ವಗತಿಯಿಂದ ಸಿದ್ಧಾಲಯಕ್ಕೆ ಹೋಗುತ್ತಾನೆ.

ತಿಕ್ಕಾಲೇ ಚದುಪಾಣಾ ಇಂದಿಯಬಲಮಾಉ ಆಣಪಾಣೋಯ ॥
ವವಹಾರಾ ಸೋ ಜೀವೋ ಣಿಚ್ಛಯಣಯದೋ ದು ಚೇದಣಾ ಜಸ್ಸ ॥ ೩ ॥

---

* ಭವಣಾಲಯ ಚಾಳೀಸಾ ವಿಂತರ ದೇವಾಣ ಹೋಂತಿ ಬತ್ತೀಸಾ ॥
ಕಪ್ಪಾಮರ ಚಉವೀಸಾ ಚಂದೋ ಸೂರೋ ಣರೋ ತಿರಿಓ ॥

ಅರ್ಥಃ—ಭವನವಾಸೀ ದೇವತೆಗಳಲ್ಲಿ ೪೦, ವ್ಯಂತರ ದೇವರಲ್ಲಿ ೩೨, ಕಲ್ಪಾಮರರಲ್ಲಿ ೨೪, ಚಂದ್ರ ೧, ಸೂರ್ಯ ೧, ಚಕ್ರವರ್ತಿ ೧ ಮತ್ತು ಸಿಂಹ ೧ ಹೀಗೆ ತ್ರಿಭುವನದಲ್ಲಿ ೧೦೦ ಇಂದ್ರರು ಇರುತ್ತಾರೆ. (ಇವರೆಲ್ಲರೂ ಸಮವಸರಣದಲ್ಲಿ ಶ್ರೀಜಿನೇಶ್ವರನನ್ನು ಪೂಜಿಸಿ, ಅವನ ದಿವ್ಯಧ್ವನಿಯಿಂದ ಬೋಧಿಸಲ್ಪಟ್ಟ ಧರ್ಮಾಧರ್ಮ ಸ್ವರೂಪವನ್ನು ಕೇಳಿ ಕೃತಾರ್ಥರಾಗುತ್ತಾರೆ.)

ಅರ್ಥ:—ತ್ರಿಕಾಲದಲ್ಲಿ ಇಂದ್ರಿಯ, ಬಲ, ಆಯು ಮತ್ತು ಶ್ವಾಸೋಚ್ಛ್ವಾಸ ಈ ೪ ಪ್ರಾಣಗಳನ್ನು ಧರಸಿದವನಿಗೆ ವ್ಯವಹಾರನಯದಿಂದ ಜೀವ ಅನ್ನುತ್ತಾರೆ; ಮತ್ತು ನಿಶ್ಚಯನಯದಿಂದ ಶುಧ್ಧ ಚೈತನ್ಯವುಳ್ಳವನೇ ಆತ್ಮನೆಂದು ಹೇಳಲ್ಪಡುತ್ತಾನೆ.

ಉವಓಗೋ ದುವಿಯಪ್ಪೋ ದಂಸಣಣಾಣಂ ಚ ದಂಸಣಂ ಚದುಧಾ ||
ಚಕ್ಖು ಅಚಕ್ಖು ಓಹೀ ದಂಸಣಮಥ ಕೇವಲಂ ಣೇಯಂ || ೪ ||

ಅರ್ಥ:—ದರ್ಶನ ಮತ್ತು ಜ್ಞಾನ ಇವುಗಳಿಂದ ಉಪಯೋಗವು ದ್ವಿವಿಧವಾಗಿದೆ. ೧ ಚಕ್ಷುದರ್ಶನ, ೨ ಅಚಕ್ಷುದರ್ಶನ, ೩ ಅವಧಿದರ್ಶನ, ೪ ಕೇವಲದರ್ಶನ ಹೀಗೆ ದರ್ಶನದಲ್ಲಿ ನಾಲ್ಕು ಭೇದಗಳುಂಟು.

ಣಾಣಂ ಅಠ್ಠವಿಯಪ್ಪಂ ಮದಿಸುದಿಓಹೀ ಅಣಾಣಣಾಣಾಣಿ ||
ಮಣಪಜ್ಜವಕೇವಲಮವಿ ಪಚ್ಚಕ್ಖ ಪರೋಕ್ಖಭೇಯಂ ಚ || ೫ ||

ಅರ್ಥ:—ಕುಮತಿ, ಕುಶ್ರುತ ಮತ್ತು ಕುಅವಧಿ ಎಂಬ ಮೂರು ಅಜ್ಞಾನಗಳೂ ಹಾಗು ಮತಿ, ಶ್ರುತಿ, ಅವಧಿ, ಮನಃಪರ್ಯಾಯ ಮತ್ತು ಕೇವಲ ಎಂಬ ಐದು ಜ್ಞಾನಗಳೂ ಕೂಡಿ, ಜ್ಞಾನದಲ್ಲಿ ಎಂಟು ಭೇದಗಳು ಇರುತ್ತವೆ. ಜ್ಞಾನದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ * ಎಂದು ಬೇರೆ ಎರಡು ಭೇದಗಳುಂಟು.

ಅಠ್ಠ ಚದು ಣಾಣ ದಂಸಣ ಸಾಮಣ್ಣಂ ಜೀವಲಕ್ಖಣಂ ಭಣಿಯಂ ||
ವವಹಾರಾ ಸುದ್ಧಣಯಾ ಸುದ್ಧಂ ಪುಣ ದಂಸಣಂ ಣಾಣಂ || ೬ ||

ಅರ್ಥ:—ಎಂಟು ಪ್ರಕಾರದ ಜ್ಞಾನವು ಮತ್ತು ನಾಲ್ಕು ಪ್ರಕಾರದ ದರ್ಶನವು ಸಾಮಾನ್ಯವಾಗಿ ವ್ಯವಹಾರನಯದಿಂದ ಜೀವದ ಲಕ್ಷಣವೆಂದು ಹೇಳಲ್ಪಟ್ಟದೆ. ಶುಧ್ಧ ಅಥವಾ ನಿಶ್ಚಯನಯದಿಂದ ಶುಧ್ಧಜ್ಞಾನ ಮತ್ತು ಶುಧ್ಧದರ್ಶನ ಇವೇ ಜೀವದ ಲಕ್ಷಣವೆಂದು ತಿಳಿಯಬೇಕು.

ವಣ್ಣ ರಸ ಪಂಚ ಗಂಧಾ ದೋ ಫಾಸಾ ಅಠ್ಠ ಣಿಚ್ಛಯಾ ಜೀವೇ ||
ಣೋ ಸಂತಿ ಅಮುತ್ತಿ ತದೋ ವವಹಾರಾ ಮುತ್ತಿ ಬಂಧಾದೋ || ೭ ||

---

* ಮಇ ಸುಇ ಪರೋಕ್ಖಣಾಣಂ ಓಹೀ ಮಣ ಹೋಇ ವಿಯಲಪಚ್ಚಕ್ಖಮ್ ||
ಕೇವಳಣಾಣಂ ಚ ತಹಾ ಅಣೋವಮಂ ಹೋಇ ಸಯಲಪಚ್ಚಕ್ಖಮ್ || ೧ ||

ಅರ್ಥ:—ಮತಿ ಮತ್ತು ಶ್ರುತಿ ಇವುಗಳಿಂದ ಪರೋಕ್ಷ ಜ್ಞಾನವೂ, ಅವಧಿ ಮನಃಪರ್ಯಾಯುಗಳಿಂದ ವಿಕಲಪ್ರತ್ಯಕ್ಷಜ್ಞಾನವೂ, ಕೇವಲದಿಂದ ಸಕಲಪ್ರತ್ಯಕ್ಷಜ್ಞಾನವೂ ಆಗುತ್ತದೆ.

ಅರ್ಥ:—ಶ್ವೇತ, ಪೀತ, ಹರಿತ, ರಕ್ತ ಮತ್ತು ಕೃಷ್ಣ ಎಂಬ ಐದು ವರ್ಣಗಳೂ ಶೀ, ಹುಳಿ, ಕಹಿ, ಲವಣ ಮತ್ತು ತಿಕ್ತ ಎಂಬ ಐದು ರಸಗಳೂ ಸುಗಂಧ ಮತ್ತು ದುರ್ಗಂಧ ಎಂಬ ಎರಡು ಗಂಧಗಳೂ ಹಾಗು ಶೀತ, ಉಷ್ಣ, ಸ್ನಿಗ್ಧ, ರೂಕ್ಷ, ಮೃದು, ಕರ್ಕಶ, ಗುರು (ಜಡ) ಮತ್ತು ಲಘು (ಹಗುರು) ಎಂಬ ಎಂಟು ಸ್ಪರ್ಶಗಳೂ ಶುದ್ಧ ನಿಶ್ಚಯನಯದಿಂದ ಜೀವದಲ್ಲಿ ಇಲ್ಲದೇ ಇರುವದರಿಂದ, ಜೀವವು ಅಮೂರ್ತವಾಗಿದೆ; ಆದರೆ ವ್ಯವಹಾರನಯದಿಂದ ನೋಡಿದರೆ, ಜೀವವು ಕರ್ಮಬಂಧಗಳ ಅಪೇಕ್ಷೆಯಿಂದ ಮೂರ್ತಿಯುಳ್ಳದ್ದು ಆಗಿದೆ.

ಪುಗ್ಗಲಕಮ್ಮಾದೀಣಂ ಕತ್ತಾ ವವಹಾರದೋ ದು ಣಿಚ್ಛಯದೋ ॥
ಚೇದಣಕಮ್ಮಾಣಾದಾ ಸುದ್ಧಣಯಾ ಸುದ್ಧಭಾವಾಣಂ ॥ ೮ ॥

ಅರ್ಥ:—ವ್ಯವಹಾರನಯಾಪೇಕ್ಷೆಯಿಂದ ಜೀವವು ಜ್ಞಾನಾವರಣ, ಶರೀರ ಮುಂತಾದ ಕರ್ಮಗಳಿಗೆ ಕರ್ತೃ ಆಗಿದೆ. ಅಶುದ್ಧ ನಿಶ್ಚಯನಯದಿಂದ ರಾಗದ್ವೇಷ ಮುಂತಾದ ಅಶುದ್ಧ ಚೇತನಭಾವಗಳಿಗೆ ಜೀವವು ಕರ್ತೃ ಆಗಿದೆ. ಶುದ್ಧನಯದಿಂದ ನೋಡಲು, ಶುದ್ಧಭಾವಗಳಿಗೆ (ಅನಂತಜ್ಞಾನಸುಖ ಮುಂತಾದವುಗಳಿಗೆ) ಕರ್ತೃ ಆಗಿದೆ.

ವವಹಾರಾ ಸುಹದುಕ್ಖಂ ಪುಗ್ಗಲಕಮ್ಮಫಲಂ ಪಭುಂಜೇದಿ ॥
ಆದಾ ಣಿಚ್ಛಯಣಯದೋ ಚೇದಣಭಾವಂ ಖು ಆದಸ್ಸ ॥ ೯ ॥

ಅರ್ಥ:—ವ್ಯವಹಾರನಯಾಪೇಕ್ಷೆಯಿಂದ ಆತ್ಮನು ಸುಖದು:ಖರೂಪವಾದ ಪುದ್ಗಲಕರ್ಮಗಳ ಫಲಗಳನ್ನು ಭೋಗಿಸುತ್ತಾನೆ. ಆದರೆ ನಿಶ್ಚಯನಯದಿಂದ ಶುದ್ಧ ಚೈತನ್ಯಸ್ವರೂಪವನ್ನು ಭೋಗಿಸುತ್ತಾನೆ.

ಅಣುಗುರುದೇಹಪಮಾಣೋ ಉವಸಂಹಾರಪ್ಪಸಪ್ಪದೋ ಚೇದಾ ॥
ಅಸಮುಹದೋ ವವಹಾರಾ ಣಿಚ್ಛಯಣಯದೋ ಅಸಂಖದೇಸೋ ವಾ ॥ ೧೦ ॥

ಅರ್ಥ:—ವ್ಯವಹಾರನಯಾಪೇಕ್ಷೆಯಿಂದ ಸ್ಥೂಲ ಮತ್ತು ಸೂಕ್ಷ್ಮ ದೇಹಗಳನ್ನು ಪಡೆದ ಅವಸ್ಥೆಯಲ್ಲಿ, ಸಂಕೋಚವಿಸ್ತಾರಗಳಿಂದ ಜೀವವು ಶರೀರದ ಮಾನದಂತೆ ಸಣ್ಣದೂ ದೊಡ್ಡದೂ ಆಗುತ್ತದೆ. ನಿಶ್ಚಯನಯದಿಂದ ನೋಡಲು, ಜೀವವು ಅಸಂಖ್ಯಾತ ಪ್ರದೇಶವುಳ್ಳದ್ದು ಇರುತ್ತದೆ.

ಪುಢವಿಜಲತೇಯವಾಊ ವಣಪ್ಫದೀ ವಿವಿಹಥಾವರೇ ಇಂದೀ ॥
ವಿಗತಿಗಚದುಪಂಚಕ್ಖಾ ತಸಜೀವಾ ಹೋಂತಿ ಸಂಖಾದೀ ॥ ೧೧ ॥

ಅರ್ಥ:—ಪೃಥ್ವೀ, ಜಲ, ತೇಜ, ವಾಯು ಮತ್ತು ವನಸ್ಪತಿ ಎಂದು ಸ್ಥಾವರ ಜೀವಗಳಲ್ಲಿ ಐದು ಭೇದಗಳುಂಟು. ಇವುಗಳಿಗೆ "ಸ್ಪರ್ಶನ" ಎಂಬ ಒಂದೇ ಇಂದ್ರಿಯವು ಇರುವದು. ಶಂಖ ಮುಂತಾದ ದ್ವೀಂದ್ರಿಯ ಜೀವಗಳಿಗೂ ತ್ರೀಂದ್ರಿಯ, ಚತುರೀಂದ್ರಿಯ ಮತ್ತು ಪಂಚೇಂದ್ರಿಯಗಳನ್ನು ಧರಿಸುವ ಜೀವಗಳಿಗೂ "ತ್ರಸ" ಜೀವ ಅನ್ನುತ್ತಾರೆ.

ಸಮಣಾ ಅಮಣಾ ಣೇಯಾ ಪಂಚಿಂದಿಯಾ ಣಿಮ್ಮಣಾ ಪರೇ ಸವ್ವೇ ||
ಬಾದರಸುಹಮೇ ಇಂದೀ ಸವ್ವೇ ಪಜ್ಜತ್ತ ಇದರಾಯ || ೧೨ ||

ಅರ್ಥಃ—ಪಂಚೇಂದ್ರಿಯ ಜೀವಗಳಲ್ಲಿ ಸಂಜ್ಞಿ (ಸಮನಸ್ಕ) ಮತ್ತು ಅಸಂಜ್ಞಿ (ಅಮನಸ್ಕ) ಎಂದು ಎರಡು ಭೇದಗಳುಂಟು. ದ್ವೀಂದ್ರಿಯ, ತ್ರೀಂದ್ರಿಯ ಮತ್ತು ಚತುರೀಂದ್ರಯ ಜೀವಗಳು ಅಮನಸ್ಕವಾಗಿರುತ್ತವೆ. ಏಕೇಂದ್ರಿಯಗಳಲ್ಲಿ ಸೂಕ್ಷ್ಮ ಮತ್ತು ಬಾದರ (ಸ್ಥೂಲ) ಎಂದು ಎರಡು ಭೇದಗಳುಂಟು. ಈ ಏಳು ಪ್ರಕಾರದ ಜೀವಗಳಲ್ಲಿ ಕೆಲವು ಪರ್ಯಾಪ್ತ* ವಾಗಿಯೂ ಕೆಲವು ಅಪರ್ಯಾಪ್ತವಾಯೂ ಆಗಿರುವದರಿಂದ, ಎಲ್ಲ ಕೂಡಿ ಹದಿನಾಲ್ಕು ಜೀವಸಮಾಸಗಳು ಇರುತ್ತವೆ.

ಮಗ್ಗಣಗುಣಠಾಣೇಹಿ ಯ ಚಉದಸಹಿ ಹವಂತಿ ತಹ ಅಸುದ್ಧಣಯಾ ||
ವಿಣ್ಣೇಯಾ ಸಂಸಾರೀ ಸವ್ವೇ ಸುದ್ಧಾ ಹು ಸುದ್ಧಣಯಾ || ೧೩ ||

ಅರ್ಥಃ—ಅಶುದ್ಧನಯಾಪೇಕ್ಷೆಯಿಂದ ಸಂಸಾರೀ (ಸಂಸಾರದಲ್ಲಿ ತಿರುಗುವಂಥ ಅಥವಾ ಮುಕ್ತಿಯನ್ನು ಪಡೆಯದಂಥ) ಜೀವಗಳಲ್ಲಿ ಹದಿನಾಲ್ಕು

---

* ಆಹಾರಸರೀರಿಂದಿಯ ಪಜ್ಜತ್ತೀ ಆಣಪಾಣಭಾಸಮಣೋ ||
ಚತ್ತಾರೀ ಪಂಚ ಛಪ್ಪಿಯ ಇಗವಿಗಲಾಸಣ್ಣಿಸಣ್ಣೀಣಂ || ೧ ||

ಅರ್ಥಃ—ಆಹಾರ, ಶರೀರ, ಇಂದ್ರಿಯ, ಶ್ವಾಸೋಚ್ಛ್ವಾಸ, ಭಾಷೆ ಮತ್ತು ಮನಸ್ಸು ಇವುಗಳಿಗೆ ಆರು ಪರ್ಯಾಪ್ತಿಗಳೆನ್ನುತ್ತಾರೆ. ಇವುಗಳಲ್ಲಿ ಏಕೇಂದ್ರಿಯ ಜೀವಿಗಳಿಗೆ ಆಹಾರ, ಶರೀರ, ಇಂದ್ರಿಯ ಮತ್ತು ಶ್ವಾಸೋಚ್ಛ್ವಾಸ ಎಂಬ ನಾಲ್ಕು ಪರ್ಯಾಪ್ತಿಗಳು ಇರುವವು. ಸಂಜ್ಞಿ ಪಂಚೇಂದ್ರಿಯ ಜೀವಿಗಳಿಗೆ ಆರೂ ಪರ್ಯಾಪ್ತಿಗಳಿರುತ್ತವೆ. ಉಳಿದ ಎಲ್ಲ ಜೀವಿಗಳಿಗೆ ಮನಸ್ಸಿನ ಹೊರ್ತು ಉಳಿದ ಐದು ಪರ್ಯಾಪ್ತಿಗಳಿರುತ್ತವೆ.

ಗುಣಸ್ಥಾನ*ಗಳಿಂದಲೂ ಹದಿನಾಲ್ಕು ಮಾರ್ಗಣಾಸ್ಥಾನ§ಗಳಿಂದಲೂ ಹದಿನಾಲ್ಕು ಹದಿನಾಲ್ಕು ಭೇದಗಳುಂಟು. ಶುದ್ಧನಯಾಪೇಕ್ಷೆಯಿಂದ ಎಲ್ಲ ಸಂಸಾರೀ ಜೀವಿಗಳು ಶುದ್ಧವಾಗಿಯೇ ಇರುವವು.

ಇನ್ನು ಇವುಗಳ ಒಳಭೇದಗಳನ್ನು ಹೇಳುತ್ತೇವೆ:—

(೧). ನರಕಗತಿ, ತಿರ್ಯಂಚಗತಿ, ಮನುಷ್ಯಗತಿ ಮತ್ತು ದೇವಗತಿ ಎಂದು ಗತಿಗಳಲ್ಲಿ ನಾಲ್ಕು ಭೇದಗಳುಂಟು. (೨). ಸ್ಪರ್ಶನ, ರಸನ, ಘ್ರಾಣ, ನೇತ್ರ ಮತ್ತು ಶ್ರೋತ್ರ ಎಂದು ಐದು ಇಂದ್ರಿಯಗಳು ಇರುತ್ತವೆ. (೩). ಪ್ರಥಿವೀ, ಜಲ, ತೇಜ, ವಾಯು, ವನಸ್ಪತಿ ಮತ್ತು ತ್ರಸ ಎಂದು ಶರೀರದ ಸಂಬಂಧದಿಂದ ಆರು ಮಾರ್ಗಣೆಗಗಳು. (೪). ಮನ, ವಚನ, ಕಾಯಗಳಿಂದ ಯೋಗಮಾರ್ಗಣಾಸ್ಥಾನಗಳು ಮೂರು ಪ್ರಕಾರದವುಗಳು ಇರುವವು. (೫). ಸ್ತ್ರೀಪುನ್ನಪುಂಸಗಳಿಂದ ಮಾರ್ಗಣಾಸ್ಥಾನದಲ್ಲಿ ಮೂರು ಭೇದಗಳು. (೬). ಅನಂತಾನುಬಂಧೀ ಅಪ್ರತ್ಯಾಖ್ಯಾನ ಪ್ರತ್ಯಾಖ್ಯಾನ ಸಂಜ್ವಲನ ಕ್ರೋಧ, ಮಾನ, ಮಾಯಾ, ಲೋಭಗಳೆಂಬ ಹದಿನಾರು ಕಷಾಯಗ

---

* ಮಿಚ್ಛಾ ಸಾಸಣ ಮಿಸ್ಸೋ ಅವಿರದಸಮ್ಮೋಯ ದೇಸವಿರದೋಯ ॥
ವಿರಯಾಪಮತ್ತ ಇಯರೋ ಅಪುಬ್ಬ ಅಣಿಯಟ್ಠಿ ಸುಹಮೋಯ ॥ ೧ ॥
ಉವಸಂತಖೀಣಮೋಹೋ ಸಜೋಗಿಕೇವಲಿಜಿಣೋ ಅಜೋಗೀಯಾ ॥
ಚೌದಸ ಗುಣಠ್ಠಾಣಾಣಿ ಇಯ ಕಮೇಣ ಸಿದ್ಧಾಯ ಣಾಯಪ್ಪಾ ॥ ೨ ॥

ಅರ್ಥಃ—೧ ಮಿಥ್ಯಾದೃಷ್ಟಿ, ೨ ಸಾಸಾದನ, ೩ ಮಿಶ್ರ, ೪ ಅವಿರತಸಮ್ಯಗ್‌ದೃಷ್ಟಿ, ೫ ದೇಶವಿರತ (ಅಣುವ್ರತಿಕನಾದ ಶ್ರಾವಕನು), ೬ ಪ್ರಮತ್ತಸಂಯತ, ೭ ಅಪ್ರಮತಸಂಯತ, ೮ ಅಪೂರ್ವಕರಣ, ೯ ಅನಿವೃತ್ತಿಕರಣ, ೧೦ ಸೂಕ್ಷ್ಮಸಾಂಪರಾಯ, ೧೧ ಉಪಶಾಂತಕಷಾಯ, ೧೨ ಕ್ಷೀಣಕಷಾಯ, ೧೩ ಸಯೋಗಕೇವಲೀ ಮತ್ತು ೧೪ ಅಯೋಗಕೇವಲೀ ಎಂದು ಹದಿನಾಲ್ಕು ಗುಣಸ್ಥಾನಗಳು. ಈ ಹದಿನಾಲ್ಕು ಗುಣಸ್ಥಾನಗಳನ್ನು ದಾಟಿದವರೇ ಸಿದ್ಧಪರಮೇಷ್ಠಿಗಳು.

§ ಗಇಇಂದಿಯಂ ಚ ಕಾಯೇ ಜೋಏ ವೇಏ ಕಸಾಯ ಣಾಣೇ ಯ ॥
ಸಂಜಮ ದಂಸಣ ಲೇಸ್ಸಾ ಭವಿಆ ಸಮತ್ತಸಣ್ಣಿ ಆಹಾರೇ ॥ ೧ ॥

ಅರ್ಥ:— ೧ ಗತಿ, ೨ ಇಂದ್ರಿಯ, ೩ ಶರೀರ, ೪ ಯೋಗ, ೫ ವೇದ, ೬ ಕಷಾಯ, ೭ ಜ್ಞಾನ, ೮ ಸಂಯಮ, ೯ ದರ್ಶನ, ೧೦ ಲೇಶ್ಯಾ, ೧೧ ಭವ್ಯ, ೧೨ ಸಮ್ಯಕ್ತ್ವ, ೧೩ ಸಂಜ್ಞಿ, ೧೪ ಆಹಾರ ಈ ಪ್ರಕಾರ ಹದಿನಾಲ್ಕು ಮಾರ್ಗಣಾಸ್ಥಾನಗಳಿರುವವು.

ಳಿಂದಲೂ ಒಂಭತ್ತು ನೋಕಷಾಯಗಳಿಂದಲೂ ಕಷಾಯಮಾರ್ಗಣಾಸ್ಥಾನದಲ್ಲಿ ೨೫ ಭೇದಗಳುಂಟು. (೭). ಮತಿ, ಶ್ರುತಿ, ಅವಧಿ, ಮನಃಪರ್ಯಾಯ ಮತ್ತು ಕೇವಲ ಎಂಬ ಐದು ಜ್ಞಾನಗಳೂ ಕುಮತಿ, ಕುಶ್ರುತಿ, ಕುಅವಧಿ ಎಂಬ ಮೂರು ಅಜ್ಞಾನಗಳೂ ಕೂಡಿ, ಜ್ಞಾನಮಾರ್ಗಣೆಯಲ್ಲಿ ಎಂಟು ಭೇದಗಳುಂಟು. (೮). ಸಾಮಾಯಿಕ, ಛೇದೋಪಸ್ಥಾಪನ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ ಮತ್ತು ಯಥಾಖ್ಯಾತ ಎಂಬ ಪಂಚಚಾರಿತ್ರಗಳೂ, ಸಂಯಮ ಮತ್ತು ಸಂಯಮಾಸಂಯಮ ಎಂಬ ಎರಡು ಸಂಯಮಗಳೂ ಕೂಡಿ, ಸಂಯಮಮಾರ್ಗಣೆಯಲ್ಲಿ ಏಳು ಭೇದಗಳು ಇರುತ್ತವೆ. (೯). ದರ್ಶನಮಾರ್ಗಣೆಯಲ್ಲಿ ಚಕ್ಷು, ಅಚಕ್ಷು, ಅವಧಿ ಮತ್ತು ಕೇವಲ ಎಂದು ನಾಲ್ಕು ಭೇದಗಳುಂಟು. (೧೦). ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ ಮತ್ತು ಶುಕ್ಲ ಎಂದು ಲೇಶ್ಯಗಳಲ್ಲಿ ಆರು ಭೇದಗಳು. (೧೧). ಭವ್ಯಮಾರ್ಗಣಾಸ್ಥಾನದಲ್ಲಿ ಭವ್ಯ ಮತ್ತು ಅಭವ್ಯ ಎಂದು ಎರಡು ಭೇದಗಳುಂಟು. (೧೨). ಸಮ್ಯಕ್ತ್ವಮಾರ್ಗಣೆಯಲ್ಲಿ ಔಪಶಮಿಕ, ಕ್ಷಾಯಿಕ, ಕ್ಷಯೋಪಶಮಿಕ, ಮಿಥ್ಯಾದೃಷ್ಟಿ, ಸಾಸಾದನ ಮತ್ತು ಮಿಶ್ರ ಎಂಬ ಆರು ಭೇದಗಳುಂಟು. (೧೩). ಸಂಜ್ಞಿಮಾರ್ಗಣೆಯಲ್ಲಿ ಸಂಜ್ಞಿ ಮತ್ತು ಅಸಂಜ್ಞಿ ಎಂಬ ಎರಡು ಭೇದಗಳುಂಟು. (೧೪). ಆಹಾರಮಾರ್ಗಣಾಸ್ಥಾನದಲ್ಲಿ ಆಹಾರಕ ಮತ್ತು ಅನಾಹಾರಕ ಎಂಬ ಎರಡು ಭೇದಗಳುಂಟು. ಈ ಪ್ರಕಾರ ಹದಿನಾಲ್ಕು ಮಾರ್ಗಣಾಸ್ಥಾನಗಳ ಭೇದಪ್ರಭೇದಗಳು ಹೇಳಲ್ಪಟ್ಟವೆ.

ಣಿಕ್ಕಮ್ಮಾ ಅಟ್ಠಗುಣಾ ಕಿಂಚೂಣಾ ಚರಮದೇಹದೋ ಸಿದ್ಧಾ ॥
ಲೋಯಗ್ಗಠಿದಾ ಣಿಚ್ಚಾ ಉಪ್ಪಾದವಏಹಿಂ ಸಂಜುತ್ತಾ ॥ ೧೪ ॥

ಅರ್ಥ:—(ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀಯ, ನಾಮ, ಗೋತ್ರ, ಆಯು ಮತ್ತು ಅಂತರಾಯ ಎಂಬ) ಎಂಟು ಕರ್ಮಗಳು ನಾಶವನ್ನು ಹೊಂದುವದರಿಂದ, (ಸಮ್ಯಕ್ತ್ವ, ಕೇವಲಜ್ಞಾನ, ಕೇವಲದರ್ಶನ, ಅನಂತವೀರ್ಯ, ಸೂಕ್ಷ್ಮತ್ವ, ಅವಗಾಹನ, ಅಗುರುಲಘುತ್ವ, ಅವ್ಯಾಬಾಧತೆ ಎಂಬ) ಎಂಟು ಗುಣಗಳನ್ನು ಪಡೆದವರೂ ಕಡೆಯ ದೇಹದ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ ಉನ್ನತವಾದ ಶರೀರವುಳ್ಳವರೂ, ಉತ್ಪತ್ತಿ, ವ್ಯಯ ಮತ್ತು ಸ್ಥಿತಿ * ಇವುಗಳಿಂದ ಕೂಡಿದವರೂ ತಮ್ಮ ಊರ್ಧ್ವಗಮನ ಸ್ವಭಾವದಿಂದ ಲೋಕಾಗ್ರವನ್ನು ಪಡೆದವರೂ ಸಿದ್ಧಪರಮೇಷ್ಠಿಗಳೆಂದು ಹೇಳಲ್ಪಟ್ಟಿದ್ದಾರೆ.

* ಸಂಸಾರಪರ್ಯಾಯವು ನಷ್ಟವಾದದರಿಂದಲೂ ಸಿದ್ಧಪರ್ಯಾಯದ ಉತ್ಪತ್ತಿಯಾದದರಿಂದಲೂ ಶುದ್ಧ ಜೀವದ್ರವ್ಯತ್ವದಿಂದ ನಿತ್ಯವಾಗಿಯೂ ಇರುವದರಿಂದ, ಮುಕ್ತಜೀವಗಳಿಗಾದರೂ ವ್ಯುತ್ಪತ್ತಿ, ವ್ಯಯ ಮತ್ತು ನಿತ್ಯತ್ವ ಇವುಗಳ ಸಂಬಂಧ

ಅಜೀವೋ ಪುಣ ಣೇಓ ಪುಗ್ಗಲಧಮ್ಮೋ ಅಧಮ್ಮ ಆಯಾಸಂ ॥
ಕಾಲೋ ಪುಗ್ಗಲ ಮುತ್ತೋ ರೂವಾದಿಗುಣೋ ಅಮುತ್ತಿ ಸೇಸಾಹು ॥ ೧೫॥

ಅರ್ಥ:—ಅಜೀವ ದ್ರವ್ಯದಲ್ಲಿ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಎಂಬ ಐದು ಭೇದಗಳುಂಟು; ಅವುಗಳಲ್ಲಿ ಪುದ್ಗಲ ದ್ರವ್ಯವು ರೂಪ, ರಸ, ಗಂಧ, ಸ್ಪರ್ಶ ಮುಂತಾದ ಗುಣಗಳಿಂದ ಯುಕ್ತವಾಗಿದ್ದು, ಸಾಕಾರವಾಗಿರುತ್ತದೆ; ಉಳಿದ ನಾಲ್ಕು ದ್ರವ್ಯಗಳಿಗೆ ಆಕಾರ (ಮೂರ್ತಿ) ಇಲ್ಲ.

ಸದ್ದೋ ಬಂಧೋ ಸುಹುಮೋ ಥೂಲೋ ಸಂಠಾಣ ಭೇದ ತಮ ಛಾಯಾ ॥
ಉಜ್ಜೋದಾದವಸಹಿಯಾ ಪುಗ್ಗಲದವ್ವಸ್ಸ ಪಜ್ಜಾಯಾ ॥ ೧೬ ॥

ಅರ್ಥ:—ಶಬ್ದ, ಬಂಧ, ಸೂಕ್ಷ್ಮತೆ, ಸಂಸ್ಥಾನ (ಸಮಚತುರ ಮುಂತಾದ ಆರು ಪ್ರಕಾರದ ಸಂಸ್ಥಾನಗಳು), ಭೇದ (ವಿಭಾಗ), ಕತ್ತಲೆ, ನೆರಳು, ಪ್ರಕಾಶ ಮತ್ತು ಉಷ್ಣತೆ ಇವೆಲ್ಲ ಪುದ್ಗಲ ದ್ರವ್ಯದ ಪರ್ಯಾಯವಾಗಿವೆ.

ಗಇ ಪರಿಣಯಾಣ ಧಮ್ಮೋ ಪುಗ್ಗಲಜೀವಾಣ ಗಮಣಸಹಯಾರೀ ॥
ತೋಯಂ ಜಹ ಮಚ್ಛಾಣಂ ಅಚ್ಛಾಂತಾಣೇವ ಸೋ ಣೇಈ ॥ ೧೭ ॥

ಅರ್ಥ:—ನೀರೊಳಗಿನ ಮೀನುಗಳ ಗಮನಕ್ಕೆ (ಸಂಚಾರಕ್ಕೆ) ನೀರು

ಉಂಟೆಂದು ತಿಳಿಯಬೇಕು. "ಉತ್ಪಾದವ್ಯಯಧ್ರೌವ್ಯಯುಕ್ತಂ ಸತ್" "ಸತ್ ದ್ರವ್ಯಲಕ್ಷಣಂ" ಎಂದು ತತ್ವಾರ್ಥಸೂತ್ರದಲ್ಲಿ ದ್ರವ್ಯದ ಲಕ್ಷಣವು ಹೇಳಲ್ಪಟ್ಟದೆ. ಅಂದರೆ ವ್ಯುತ್ಪತ್ತಿ, ನಾಶ ಮತ್ತು ನಿತ್ಯತ್ವ ಇವುಗಳಿಂದ ಯುಕ್ತವಾದದ್ದು "ಸತ್" ಎಂದು ಹೇಳಲ್ಪಟ್ಟದೆ. ಈ "ಸತ್" ಎಂಬುವದೇ ದ್ರವ್ಯದ ಲಕ್ಷಣವು. ಪ್ರತಿಯೊಂದು ಸಮಯದಲ್ಲಿ ಪ್ರತಿ ಒಂದು ದ್ರವ್ಯವು ಹಾನಿ-ವೃದ್ಧಿಗಳನ್ನು ಹೊಂದುತ್ತದೆ. ಹಾನಿಗೆ ವ್ಯಯವೆಂತಲೂ ವೃದ್ಧಿಗೆ ಉತ್ಪಾದವೆಂತಲೂ ಹೆಸರುಂಟು. ಮುಕ್ತವಾದ ಜೀವವು ವೃದ್ಧಿಹಾನಿಯನ್ನು ಪಡೆಯಬಹುದೇ? ಎಂಬ ಪ್ರಶ್ನಕ್ಕೆ ಸಮಾಧಾನವೇನಂದರೆ, ಪ್ರತಿ ಒಂದು ಸಮಯದಲ್ಲಿ ದ್ರವ್ಯಗಳು ವೃದ್ಧಿಹಾನಿಮಯವಾದ ಪರಿಣಾಮಗಳನ್ನು ಹೊಂದುವದರಿಂದ, ಅವುಗಳನ್ನು ತಿಳಿಯುವಂಥ ಸಿದ್ಧರ ಜ್ಞಾನವಾದರೂ ಆ ಆಕಾರಗಳಿಂದ ದ್ರವ್ಯಗಳನ್ನು ತಿಳಿಯುವದರಿಂದ, ಸಿದ್ಧರ ಜ್ಞಾನವು ಸಮಯಸಮಕ್ಕೆ ಪರಿಣಾಮವನ್ನು ಹೊಂದುತ್ತ ಹೋಗುತ್ತದೆ. ಆದ್ದರಿಂದ ಒಂದು ಪರಿಣಾಮವು ನಷ್ಟವಾದರೆ ವ್ಯಯವೆಂತಲೂ ಮತ್ತೊಂದು ಉತ್ಪನ್ನವಾದರೆ ಉತ್ಪಾದವೆಂತಲೂ ಅನ್ನುವದು ಉಪಪನ್ನವಾದದ್ದೇ ಸರಿ.

ಸಹಾಯಕವಾಗುವಂತೆ ಜೀವ ಮತ್ತು ಪುದ್ಗಲದ್ರವ್ಯಗಳಿಗೆ ಸಹಕಾರಿಯಾಗುವದೇ ಧರ್ಮದ್ರವ್ಯವು. ಗಮನವನ್ನು ಹೊಂದುವ ಜೀವಪುದ್ಗಲಗಳಿಗೆ ಧರ್ಮದ್ರವ್ಯವು ಮಾತ್ರ ಸಹಾಯಕವಾಗುತ್ತದೆ. ಆದರೆ ಧರ್ಮದ್ರವ್ಯದಿಂದಲೇ ಗತಿಯು ಉತ್ಪನ್ನವಾಗುವದಿಲ್ಲ. ಅದು ಗಮನಪರಿಣತವಾದವುಗಳಿಗೆ ಮಾತ್ರ ಸಹಾಯವನ್ನು ಮಾಡುತ್ತದೆ.

ಠಾಣ ಜುವಾಣ ಅಧಮ್ಮೋ ಪುಗ್ಗಲಜೀವಾಣ ಠಾಣಸಹಯಾರೀ ||
ಛಾಯಾ ಜಹ ಪಹಿಯಾಣಂ ಗಚ್ಛಂತಾ ಣೇವ ಸೋ ಧರಈ || ೧೮ ||

ಅರ್ಥಃ—ದಾರಿಕಾರರನ್ನು ನಿಲ್ಲಿಸುವದಕ್ಕೆ ನೆರಳು ಸಹಾಯಕವಾಗುವಂತೆ ಜೀವಪುದ್ಗಲಗಳ ಸ್ಥಿತಿಗೆ (ಗಮನಾಭಾವಕ್ಕೆ ಅಥವಾ ವಿಶ್ರಾಂತಿಗೆ) ಅಧರ್ಮ ದ್ರವ್ಯವು ಸಹಾಯಕ ಕಾರಣವಾಗುತ್ತದೆ. (ಅಂದರೆ ಮುಖ್ಯ ಕಾರಣವಲ್ಲ. ಗಮನವನ್ನು ಬಿಟ್ಟು, ಗಮನಾಭಾವ (ಸ್ವಾಧ್ಯ)ವನ್ನು ಪಡೆಯಲಿಚ್ಛಿಸುವ ಜೀವಪುದ್ಗಲಗಳಿಗೆ ಅಧರ್ಮದ್ರವ್ಯವು ಸಹಾಯವನ್ನು ಮಾಡುತ್ತದೆ. ಬಿಸಲಿನಿಂದ ತಪ್ತನಾದ ದಾರಿಕಾರನು ಬಯಸಿದರೆ ಮಾತ್ರ ಬಳಿಯಲ್ಲಿದ್ದ ನೆರಳಿನಲ್ಲಿ ಕೂತುಕೊಳ್ಳಬಹುದು. ಆದರೆ, ಅವನ ಮನಸ್ಸಿಲ್ಲಿಲ್ಲದಿದ್ದರೆ ಆ ನೆರಳು ಅವನನ್ನು ಹ್ಯಾಗೆ ಕುಳ್ಳಿರಸಲಾರದೋ ಹಾಗೆ ಅಧರ್ಮದ್ರವ್ಯವು ತನ್ನಷ್ಟಕ್ಕೆ ತಾನೇ ಸ್ವಾಧ್ಯವನ್ನುಂಟು ಮಾಡಲಾರದು. ಆ ಸ್ವಾಧ್ಯವನ್ನು ಬಯಸುವ ದ್ರವ್ಯಕ್ಕೆ ಮಾತ್ರ ಆ ಸ್ವಾಧ್ಯವನ್ನು ಉಂಟುಮಾಡುವದರಲ್ಲಿ ಕೇವಲ ಸಹಾಯಕವಾಗಿರುವದು.

ಅವಗಾಸದಾಣಜೋಗ್ಗಂ ಜೀವಾದೀಣಂ ವಿಯಾಣ ಆಯಾಸಂ ||
ಜೇಹ್ಣಂ ಲೋಗಾಗಾಸಂ ಅಲೋಗಾಗಾಸಮಿದಿ ದುವಿಹಂ || ೧೯ ||

ಅರ್ಥ:—ಜೀವಾದಿ ಆರು ದ್ರವ್ಯಗಳಿಗೆ ಅವಕಾಶವನ್ನು ಕೊಡುವದೇ ಆಕಾಶ ದ್ರವ್ಯವು. ಲೋಕಾಕಾಶ ಮತ್ತು ಅಲೋಕಾಕಾಶ ಎಂದು ಆಕಾಶದ್ರವ್ಯದಲ್ಲಿ ಎರಡು ಭೇದಗಳುಂಟು.

ಧಮ್ಮಾ ಧಮ್ಮಾ ಕಾಲೋ ಪುಗ್ಗಲಜೀವಾಯ ಸಂತಿ ಜಾವದಿ ಯೇ ||
ಆಯಾಸೇ ಸೋ ಲೋಗೋ ತತ್ತೋ ಪರದೋ ಅಲೋಗುರಿತಿ || ೨೦ ||

ಅರ್ಥ:—ಧರ್ಮ, ಅಧರ್ಮ, ಕಾಲ, ಪುದ್ಗಲ ಮತ್ತು ಜೀವ ಈ ಐದು ದ್ರವ್ಯಗಳಿಂದ ವ್ಯಾಪಿಸಲ್ಪಟ್ಟ ಆಕಾಶದ್ರವ್ಯದ ಭಾಗಕ್ಕೆ ಲೋಕಾಕಾಶವೆಂತಲೂ ಉಳಿದ ಆಕಾಶಕ್ಕೆ ಅಲೋಕಾಕಾಶವೆಂತಲೂ ಹೆಸರುಂಟು.

ದವ್ವಪರಿವಟ್ಟರೂವೋ ಜೋ ಸೋ ಕಾಲೋ ಹವೇಇ ವವಹಾರೋ ||
ಪರಿಣಾಮಾದೀ ಲಕ್ಖೋ ವಟ್ಟಣಲಕ್ಖೋಯ ಪರಮತ್ಥೋ || ೨೧ ||

ಅರ್ಥ:—ದ್ರವ್ಯಗಳ ಪರ್ಯಾಯಗಳನ್ನು ತಿರುಗಿಸುವದಕ್ಕೆ (ಹೆಚ್ಚು ಕಡಿಮೆ ಮಾಡಲಿಕ್ಕೆ) ಕಾರಣವಾದ ಸಮಯ, ಘಟಿಕಾ ಮುಂತಾದ ಸ್ವರೂಪವುಳ್ಳ ಕಾಲಕ್ಕೆ ವ್ಯವಹಾರಕಾಲ ಅನ್ನುತ್ತಾರೆ. ಈ ವ್ಯವಹಾರಕಾಲವು ಪರಿಣಾಮಾದಿಗಳಿಂದ ಲಕ್ಷಿಸಲ್ಪಡುತ್ತದೆ; ಅಂದರೆ ಪರಿಣಾಮ ಮುಂತಾದವುಗಳು ವ್ಯವಹಾರಕಾಲದ ಲಕ್ಷಣಗಳಾಗಿವೆ. (ಗುಣ ಮತ್ತು ಪರ್ಯಾಯ ಇವುಗಳಿಗೆ ಪರಿಣಾಮ ಅನ್ನುತ್ತಾರೆ.) ಚಿಕ್ಕವನು, ದೊಡ್ಡವನು ಎಂಬ ಪರತ್ವಾಪರತ್ವ ಭೇದವಾದರೂ ಪರಿಣಾಮ ಅನಿಸುತ್ತದೆ. ವರ್ತನಾಲಕ್ಷಣವುಳ್ಳ ಕಾಲಕ್ಕೆ ನಿಶ್ಚಯಕಾಲ ಅನ್ನುತ್ತಾರೆ. ವರ್ತನಾ ಅಂದರೆ ಕ್ರಿಯಾ; ಅದುದರಿಂದ ಕ್ರಿಯೆಗೆ ಆಧಾರಭೂತವಾದದ್ದೇ ನಿಶ್ಚಯಕಾಲವು; ಇದಕ್ಕೆ ಮುಖ್ಯಕಾಲವೆಂತಲೂ ಹೆಸರುಂಟು.

ಲೋಯಾಯಾಸಪದೇಸೇ ಇಕ್ಕಿಕ್ಕೇ ಜೇ ಠಿಯಾಹು ಇಕ್ಕಿಕ್ಕಾ ॥
ರಯಣಾಣಂ ರಾಸೀ ಇವ ತೇ ಕಾಲಾಣೂ ಅಸಂಖದವ್ವಾಣಿ ॥ ೨೨ ॥

ಅರ್ಥಃ—ಲೋಕಾಕಾಶದ ಎಲ್ಲ ಪ್ರದೇಶಗಳಲ್ಲಿ ಪರಿಪಾಟಿಯಿಂದ ಒಂದೊಂದರಲ್ಲಿ ಒಂದೊಂದು ಮುಖ್ಯಕಾಲದ ಅಸಂಖ್ಯ ಪರಮಾಣುಗಳು ರತ್ನಗಳ ರಾಸಿಯಂತೆ ತುಂಬಿಹೋಗಿವೆ; ಆಕಾಶದಂತೆ ಕಾಲದ್ರವ್ಯವಾದರೂ ಅಸಂತವಾಗಿದೆ.

ಏವಂ ಛಬ್ಭೇಯಮಿದಂ ಜೀವಾಜೀವಪ್ಪಭೇದದೋ ದವ್ವಂ ॥
ಉತ್ತಂ ಕಾಲವಿಜುತ್ತಂ ಣಾದವ್ವಾ ಪಂಚ ಅತ್ಥಿಕಾಯಾದು ॥ ೨೩ ॥

ಅರ್ಥಃ—ಈ ಪ್ರಕಾರ ಒಂದು ಜೀವದ್ರವ್ಯವು ಮತ್ತು ಉಳಿದ ಐದು ಅಜೀವ ದ್ರವ್ಯಗಳು ಕೂಡಿ ಆರುಪ್ರಕಾರದ ದ್ರವ್ಯಗಳು ಹೇಳಲ್ಪಟ್ಟವೆ. ಈ ಆರು ದ್ರವ್ಯಗಳಲ್ಲಿ ಕಾಲದ್ರವ್ಯವನ್ನು ಬಿಟ್ಟು, ಉಳಿದ ಐದು ದ್ರವ್ಯಗಳು ಅಸ್ತಿಕಾಯ (ಶರೀರವುಳ್ಳವು) ಆಗಿರುತ್ತವೆ.

ಸಂತಿ ಜದೋ ತೇಣೇದೇ ಅತ್ಥೀತಿ ಭಣಂತಿ ಜಿಣವರಾ ಜಮ್ಹಾ ॥
ಕಾಯಾ ಇವ ಬಹುದೇಸಾ ತಮ್ಹಾಯಾ ಕಾಯ ಅತ್ಥಿಕಾಯಾಯ ॥ ೨೪ ॥

ಅರ್ಥಃ— ಈ ಐದು ದ್ರವ್ಯಗಳು ಯಾವಾಗಲೂ ಇರುವದರಿಂದ, ಅವು ಶ್ರೀಜಿನೇಶ್ವರರಿಂದ "ಅಸ್ತಿ" ಎಂಬ ಸಂಜ್ಞೆಯಿಂದಲೂ, ಶರೀರದಂತೆ ಈ ಐದೂ ದ್ರವ್ಯಗಳಿಗೆ ಬಹು ಪ್ರದೇಶಗಳು ಇರುವದರಿಂದ "ಕಾಯ" ವೆಂಬ ಸಂಜ್ಞೆಯಿಂದಲೂ ಹೇಳಲ್ಪಟ್ಟವೆ. ಅಸ್ತಿ ಮತ್ತು ಕಾಯ ಈ ಎರಡೂ ಪದಗಳು ಕೂಡಿ "ಅಸ್ತಿಕಾಯ", ವೆಂಬ ಸಂಜ್ಞೆಯು ಕಾಲದ ಹೊರ್ತು ಉಳಿದ ಐದು ದ್ರವ್ಯಗಳಿಗೆ ಪ್ರಾಪ್ತವಾಗಿದೆ.

ಹೋಂತಿ ಅಸಂಖಾ ಜೀವೇ ಧಮ್ಮಾಧಮ್ಮೇ ಅಣಂತ ಆಯಾಸೇ ॥
ಮುತ್ತೇ ತಿವಿಹ ಪದೇಸಾ ಕಾಲಸ್ಸೇಗೋ ಣ ತೇಣ ಸೋ ಕಾಓ ॥ ೨೫ ॥

ಅರ್ಥ:—ಜೀವ, ಧರ್ಮ ಮತ್ತು ಅಧರ್ಮ ಈ ಮೂರು ದ್ರವ್ಯಗಳ ಪ್ರದೇಶಗಳು ಅಸಂಖ್ಯವಾಗಿವೆ. ಆಕಾಶದ ಪ್ರದೇಶಗಳು ಅನಂತವಾಗಿವೆ. ಪುದ್ಗಲದ ಪ್ರದೇಶಗಳು ಸಂಖ್ಯಾತ, ಅಸಂಖ್ಯಾತ ಮತ್ತು ಅನಂತವಾಗಿವೆ. ಕಾಲದ್ರವ್ಯಕ್ಕೆ ಒಂದೇ ಪ್ರದೇಶವಿರುತ್ತದೆ. ಅದರಿಂದಲೇ ಅದು ಅಸ್ತಿಕಾಯವಲ್ಲ.

ಏಯಪದೇಸೋ ವಿ ಅಣೂ ಣಾಣಾಖಂಧಪ್ಪದೇಸದೋ ಹೋದಿ ॥
ಬಹುದೇಸೋ ಉವಯಾರಾ ತೇಣ ಯ ಕಾಓ ಭಣಂತಿ ಸವ್ವಣ್ಹು ॥ ೨೬ ॥

ಅರ್ಥ:—(ಪುದ್ಗಲ ಪರಮಾಣುವಾದರೂ ಏಕಪ್ರದೇಶವುಳ್ಳದ್ದು ಇದ್ದು, ಅದಕ್ಕೆ ಕಾಯತ್ವವು ಸಂಭವಿಸುವದಿಲ್ಲ ಎಂಬ ಸಂಶಯವನ್ನು ನಿರಾಕರಿಸುವದಕ್ಕಾಗಿ, ಆಚಾರ್ಯರು ಈ ಗಾಥೆಯನ್ನು ಬರೆದಿದ್ದಾರೆ.) ಏಕಪ್ರದೇಶವುಳ್ಳ ಪರಮಾಣುವಾದರೂ ಬಹುಪ್ರದೇಶವುಳ್ಳದ್ದು ಆಗುತ್ತದೆ. ಆದ್ದರಿಂದ ಆ ಪರಮಾಣು ಪುದ್ಗಲದ ಅನೇಕ ಪ್ರಕಾರದ ಸ್ಕಂಧಪ್ರದೇಶಗಳು ಆಗುತ್ತವೆ. ಇದರಿಂದ ತತ್ವಜ್ಞರು ಪುದ್ಗಲದ ಪರಮಾಣುವಿಗೂ ಉಪಚಾರದಿಂದ ಕಾಯಸಂಜ್ಞೆಯನ್ನು ಕೊಟ್ಟಿದ್ದಾರೆ.

ಜಾವದಿಯಂ ಆಯಾಸಂ ಅವಿಭಾಗೀ ಪುಗ್ಗಲಾಣು ಉಟ್ಟದ್ಧಂ ॥
ತಂಖು ಪದೇಸಂ ಜಾಣೇ ಸವ್ವಾಣುಟ್ಠಾಣದಾಣರಿಹಂ ॥ ೨೭ ॥

ಅರ್ಥ:—ಅತ್ಯಂತ ಸೂಕ್ಷ್ಮವಾದ ಪುದ್ಗಲದ ಒಂದು ಪರಮಾಣುವಿನಿಂದ ವ್ಯಾಪಿಸಲ್ಪಡುವ ಆಕಾಶದ ಭಾಗಕ್ಕೆ ಒಂದು 'ಪ್ರದೇಶ' ಅನ್ನುತ್ತಾರೆ. ಈ ಪ್ರದೇಶವು ಜೀವಪುದ್ಗಲ ಮುಂತಾದ ದ್ರವ್ಯಗಳ ಅಣುಗಳಿಗೆ ಅವಕಾಶವನ್ನು ಕೊಡುವದಕ್ಕೆ ಸಮರ್ಥವಾಗಿದೆ ಎಂದು ತಿಳಿ. ಅಂದರೆ, ಇಷ್ಟು ಸೂಕ್ಷ್ಮವಾದ ಒಂದೇ ಪ್ರದೇಶದಲ್ಲಿ ಕಾಲದ್ರವ್ಯದ ಒಂದು ಅಣುವು, ಧರ್ಮದ್ರವ್ಯದ ಒಂದು ಅಣುವು, ಅಧರ್ಮದ್ರವ್ಯದ ಒಂದು ಅಣುವು ಮತ್ತು ಪುದ್ಗಲದ್ರವ್ಯದ ಅನೇಕ ಪರಮಾಣುಗಳು ನಿಲ್ಲಬಲ್ಲವು. (ಆಕಾಶದ ಅವಗಾಹನದಿಂದ ಪ್ರದೇಶಕ್ಕೆ ಈ ಶಕ್ತಿಯು ಪ್ರಾಪ್ತವಾಗಿರುತ್ತದೆ.)

ಷಡ್ದ್ರವ್ಯಚೂಲಿಕಾ.

ಪರಿಣಾಮಿ-ಜೀವ-ಮುತ್ತಂ, ಸಪದೇಸಂ ಏಯ-ಖೇತ್ತ-ಕಿರಿಯಾಯ ॥
ಣಿಚ್ಚಂ ಕಾರಣ-ಕತ್ತಾ, ಸವ್ವಗದಮಿದರಂ ಹಿ ಯಪವೇಸೇ ॥ ೧ ॥
ದುಣ್ಣಿಯ ಏಯಂ ಏಯಂ, ಪಂಚ-ತ್ತಿಯ ಏಯ ದುಣ್ಣಿ ಚಉರೋ ಯ ॥
ಪಂಚ ಯ ಏಯಂ ಏಯಂ, ಏದೇಸಂ ಏಯ ಉತ್ತರಂ ಣೇಯಂ॥ಯುಗ್ಮಂ॥ ೨

ಅರ್ಥ:—ಮೇಲೆ ಹೇಳಿದ ಆರು ದ್ರವ್ಯಗಳಲ್ಲಿ ಜೀವ ಮತ್ತು ಪುದ್ಗಲ ಇವೆರಡೂ ಪರಿಣಾಮವನ್ನು ಹೊಂದುವಂಥ ದ್ರವ್ಯಗಳಿರುತ್ತವೆ. ಜೀವವು ಒಂದೇ ಸಚೇತನದ್ರವ್ಯವು; ಮತ್ತು ಉಳಿದ ದ್ರವ್ಯಗಳು ಅಚೇತನವಾಗಿವೆ. ಪುದ್ಗಲ ದ್ರವ್ಯವು ಮೂರ್ತವಾಗಿದೆ. ಉಳಿದವು ಅಮೂರ್ತವಾಗಿವೆ. ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಇವು ಅಸ್ತಿಕಾಯ ದ್ರವ್ಯಗಳು (ಪ್ರದೇಶವುಳ್ಳವು) ಇರುತ್ತವೆ. ಧರ್ಮ, ಅಧರ್ಮ ಮತ್ತು ಆಕಾಶ ಈ ಮೂರು ದ್ರವ್ಯಗಳು ಏಕಸಂಖ್ಯಾತ್ಮಕವಿರುತ್ತವೆ. ಪುದ್ಗಲದ್ರವ್ಯವು ಸಂಖ್ಯಾತ, ಅಸಂಖ್ಯಾತ ಮತ್ತು ಅನಂತ ಪ್ರದೇಶವುಳ್ಳದ್ದು ಇರುತ್ತದೆ. ಜೀವಪುದ್ಗಲಗಳಿಗೆ ಕ್ರಿಯೆಯು ಉಂಟು. ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಈ ನಾಲ್ಕು ದ್ರವ್ಯಗಳಿಗೆ ನಿತ್ಯದ್ರವ್ಯ ಅನ್ನುತ್ತಾರೆ; ಇವುಗಳಿಗೆ ವಿಭಾವರೂಪ ವ್ಯಂಜನಪರ್ಯಾಯಗಳು ಇಲ್ಲ. ಜೀವ ಮಾತ್ರ ಕರ್ತೃವಾಗಿದೆ. ಲೋಕ ಮತ್ತು ಅಲೋಕ ಇವೆರಡುಗಳನ್ನು ವ್ಯಾಪಿಸಿಕೊಂಡು ಆಕಾಶವು ಸರ್ವವ್ಯಾಪಿದ್ರವ್ಯವು ಇರುತ್ತದೆ. ಈ ಆರೂ ದ್ರವ್ಯಗಳು ಒಂದೇ ಕ್ಷೇತ್ರದಲ್ಲಿ ಇರುವದಕ್ಕೆ ಅಡ್ಡಿ ಇಲ್ಲ. ಇತಿ ಷಡ್ದ್ರವ್ಯಚೂಲಿಕಾ.

ಆಸವ ಬಂಧಣ ಸಂವರ ಣಿಜ್ಜರ ಮೊಕ್ಖೋ ಸಪುಣ್ಣಪಾವಾ ಜೇ ॥
ಜೀವಾ ಜೀವವಿಸೇಸಾ ತೇವಿ ಸಮಾಸೇಣ ಪಭಣಾಮೋ ॥ ೨೮ ॥

ಅರ್ಥಃ—ಪಾಪ ಮತ್ತು ಪುಣ್ಯ ಇವುಗಳಿಂದ ಕೂಡಿದ ಆಶ್ರವವೆಂಬ ತತ್ವವೂ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಈ ಪದಾರ್ಥಗಳೂ ಜೀವಾಜೀವಗಳ ವಿಶೇಷ ಭೇದಗಳಾಗಿವೆ; ಆದ್ದರಿಂದ ಅವುಗಳನ್ನು ಕೂಡಿ ಇಲ್ಲಿ ಸಂಕ್ಷೇಪದಿಂದ ಹೇಳುತ್ತೇನೆ.

ಆಸವದಿ ಜೇಣ ಕಮ್ಮಂ ಪರಿಣಾಮೇಣಪ್ಪಣೋ ಸ ವಿಣ್ಣೇಓ ॥
ಭಾವಾಸವೋ ಜಿಣುತ್ತೋ ಕಮ್ಮಾಸವಣಂ ಪರೋ ಹೋದಿ ॥ ೨೯ ॥

ಅರ್ಥಃ--ಆತ್ಮನ ಯಾವ ಶುಭಾಶುಭ ಪರಿಣಾಮಗಳಿಂದ ಪುದ್ಗಲವು ಕರ್ಮರೂಪವನ್ನು ಹೊಂದುತ್ತದೆಯೋ, ಆ ಪರಿಣಾಮಗಳಿಗೆ ಕಾರಣವಾದದ್ದೇ ಭಾವಾಶ್ರವ ಅನಿಸುತ್ತದೆ; ಮತ್ತು ಕರ್ಮರೂಪದಿಂದ ಪರಿಣತವಾದ ಪುದ್ಗಲದ್ರವ್ಯಕ್ಕೆ ದ್ರವ್ಯಾಶ್ರವ ಅನ್ನುತ್ತಾರೆ.

ಮಿಚ್ಛತ್ತಾವಿರದಿಪಮಾದ ಜೋಗಕೋಧಾದಓಥ ವಿಣ್ಣೇಯಾ ॥
ಪಣ ಪಣ ಪಣದಸ ತಿಯ ಚದು ಕಮಸೋ ಭೇದಾದು ಪುವ್ವಸ್ಸ ॥ ೩೦ ॥

ಅರ್ಥಃ—* ೫ ಮಿಥ್ಯಾತ್ವ, † ೫ ಅವಿರತಿ, ‡ ೧೫ ಪ್ರಮಾದ, ‖ ೩ ಯೋಗ, § ೪ ಕಷಾಯ ಇವು ಭಾವಾಶ್ರವದ ಭೇದಗಳು ಇರುತ್ತವೆ.

ಣಾಣಾವರಣಾದೀಣಂ ಜೋಗ್ಗಂ ಜಂ ಪುಗ್ಗಲಂ ಸಮಾಸವದಿ ॥
ದವ್ವಾಸವೋ ಸ ಣೇಓ ಅಣೇಯಭೇಓ ಜಿಣಕ್ಖಾದೋ ॥ ೩೧ ॥

ಅರ್ಥಃ--ಜ್ಞಾನಾವರಣ ಮುಂತಾದ ಎಂಟು ಕರ್ಮಗಳಿಗೆ ಯೋಗ್ಯವಾದ ಪುದ್ಗಲ ದ್ರವ್ಯವು ದ್ರವ್ಯಾಶ್ರವವೆನಿಸುತ್ತದೆ. ಅದರಲ್ಲಿ ಅನೇಕ ಭೇದಗಳುಂಟೆಂದು ಕೇವಲಿಗಳು ಹೇಳುತ್ತಾರೆ.

ವಜ್ಝದಿ ಕಮ್ಮಂ ಜೇಣ ದು ಚೇದಣಭಾವೇಣ ಭಾವಬಂಧೋ ಸೋ ॥
ಕಮ್ಮಾದಪದೇಸಾಣಂ ಅಣ್ಣೋಣ್ಣಪವೇಸಣಂ ಇದರೋ ॥ ೩೨ ॥

---

* ಏಕಾಂತ, ವೈನಯಿಕ, ವಿಪರೀತ, ಸಂಶಯ, ಮತ್ತು ಅಜ್ಞಾನ ಹೀಗೆ ಐದು ಮಿಥ್ಯಾತ್ವಗಳು.

† ಕೊಲೆ, ಹುಸಿ, ಕಳವು, ಪರದಾರ ಮತ್ತು ಅತಿಕಾಂಕ್ಷೆ ಈ ಐದು ಪಾಪಗಳನ್ನು ಬಿಡದೆ ಇರುವದಕ್ಕೆ ಅವಿರತಿ ಅನ್ನುತ್ತಾರೆ.

ವಿಕಹಾ ತಹಾ ಕಸಾಯಾ ಇಂದಿಯಣಿದ್ದಾ ತಹೇವ ಪಣಯೋ ಯ ॥
ಚದು ಚದು ಪಣಮೇಗೇಗಂ ಹೋಂತಿ ಪಮಾದಾ ಹು ಪನ್ನರಸ ॥ ೧ ॥

ಅರ್ಥಃ—‡ ೪ ವಿಕಥೆಗಳು, ೪ ಕಷಾಯಗಳು, ೫ ಇಂದ್ರಿಯಗಳು, ನಿದ್ರೆ ಮತ್ತು ರಾಗದ್ವೇಷ ಹೀಗೆ ೧೫ ಪ್ರಮಾದಗಳುಂಟು.

‖ ಮನ, ವಚನ, ಕಾಯ ಇವುಗಳ ಅಶುಭ ವ್ಯಾಪಾರಗಳು.

§ ಕ್ರೋಧ, ಮಾನ, ಮಾಯಾ, ಲೋಭ.

ಅರ್ಥಃ—ಆತ್ಮನ ಯಾವ ಪರಿಣಾಮುಗಳಿಂದ ಕರ್ಮಬಂಧನವು ಆಗುತ್ತದೆ, ಅವುಗಳಿಗೆ ಭಾವಬಂಧ ಅನ್ನುತ್ತಾರೆ. ಕರ್ಮ ಮತ್ತು ಜೀವ ಇವುಗಳ ಪ್ರದೇಶಗಳು ಅನ್ಯೋನ್ಯವಾಗಿ ಒಂದರಲ್ಲೊಂದು ಸೇರುವದೇ ದ್ರವ್ಯಬಂಧವು.

ಪಯಡಿಟ್ಠಿದಿಅಣುಭಾಗಪದೇಸಭೇದಾ ದು ಚದುವಿಧೋ ಬಂಧೋ ॥
ಜೋಗಾ ಪಯಡಿಪದೇಸಾ ಟ್ಠಿದಿಅಣುಭಾಗಾ ಕಸಾಯದೋ ಹೋಂತಿ ॥೩೩॥

ಅರ್ಥಃ—ಬಂಧದಲ್ಲಿ ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶ ಎಂಬ ನಾಲ್ಕು ಭೇದಗಳು ಉಂಟು. ಅವುಗಳಲ್ಲಿ ಪ್ರಕೃತಿ ಮತ್ತು ಪ್ರದೇಶ ಎಂಬ ಎರಡು ಭೇದಗಳು ಮನ-ವಚನ-ಕಾಯ ಇವುಗಳ ವ್ಯಾಪಾರಗಳಿಂದಾಗುತ್ತವೆ. ಉಳಿದ ಸ್ಥಿತಿ ಮತ್ತು ಅನುಭಾಗ ಎಂಬ ಎರಡು ಭೇದಗಳು ಕಷಾಯಗಳಿಂದ ಆಗುತ್ತವೆ.

ಚೇದಣಪರಿಣಾಮೋ ಜೋ ಕಮ್ಮಸ್ಸಾಸವಣಿರೋಹಣೇ ಹೇದೂ ॥
ಸೋ ಭಾವಸಂವರೋ ಖಲು ದವ್ವಾಸವರೋಹಣೇ ಅಣ್ಣೋ ॥ ೩೪ ॥

ಅರ್ಥಃ—ಹೊಸದಾಗಿ ಬರುವಂಥ ಕರ್ಮದ ಶಿಲೆಗಳನ್ನು (ದ್ವಾರಗಳನ್ನು) ಪ್ರತಿಬಂಧಿಸುವ ಆತ್ಮನ ಪರಿಣಾಮುಗಳಿಗೆ ಭಾವಸಂವರ ಅನ್ನುತ್ತಾರೆ. ದ್ರವ್ಯಾಶ್ರವಗಳನ್ನು ಪ್ರತಿಬಂಧಿಸುವದೇ ದ್ರವ್ಯಸಂವರವು.

ವದಸಮಿದೀಗುತ್ತೀಓ ಧಮ್ಮಾಣುಪೇಹಾ ಪರೀಸಹಜಓ ಯ ॥
ಚಾರಿತ್ತಂ ಬಹುಭೇಯಾ ಣಾಯುವ್ವಾ ಭಾವಸಂವರ ವಿಸೇಸಾ ॥ ೩೫ ॥

ಅರ್ಥಃ-ವ್ರತ, ಸಮಿತಿ, ಗುಪ್ತಿ, ಅನುಪ್ರೇಕ್ಷಾ, ಪರೀಷಹಗಳನ್ನು ಗೆಲ್ಲುವದು, ಚಾರಿತ್ರ ಮುಂತಾದ ಅನೇಕ ಭೇದಗಳು ಭಾವಸಂವರದಲ್ಲುಂಟು.

ಜಹ ಕಾಲೇಣ ತವೇಣ ಯ ಭುತ್ತರಸಂ ಕಮ್ಮಪುಗ್ಗಲಂ ಜೇಣ ॥
ಭಾವೇಣ ಸಡದಿ ಣೇಯಾ ತಸ್ಸಡಣಂ ಚೇದಿ ನಿಜ್ಜರಾ ದುವಿಹಾ ॥ ೩೬ ॥

ಅರ್ಥ:—ಆತ್ಮನ ಯಾವ ಪರಿಣಾಮುಗಳಿಂದ ಕರ್ಮಮಯ ಪುದ್ಗಲವು ಫಲವನ್ನು ಕೊಟ್ಟು ನಾಶವಾಗುತ್ತದೆ, ಅವುಗಳಿಗೆ ಭಾವನಿರ್ಜರೆ ಅನ್ನುತ್ತಾರೆ. ಮತ್ತು ಕಾಲಮರ್ಯಾದೆಯು ತೀರಿದನಂತರ ಹಾಗು ತಪಸ್ಸಿನಿಂದ ಕರ್ಮವು ನಾಶಹೊಂದುವದಕ್ಕೆ ದ್ರವ್ಯನಿರ್ಜರೆ ಎಂದೆನ್ನುವರು.

ಸವ್ವಸ್ಸ ಕಮ್ಮಣೋ ಜೋ ಖಯಹೇದೂ ಅಪ್ಪಣೋ ಹು ಪರಿಣಾಮೋ ॥
ಣೇಯೋ ಸ ಭಾವಮುಕ್ಖೋ ದವ್ವವಿಮುಕ್ಖೋ ಯ ಕಮ್ಮಪುಹಭಾವೋ ॥

ಅರ್ಥ:—ಎಲ್ಲ ಕರ್ಮಗಳನ್ನು ನಾಶಪಡಿಸುವದಕ್ಕೆ ಕಾರಣೀಭೂತವಾದ ಆತ್ಮನ ಪರಿಣಾಮಕ್ಕೆ ಭಾವಮೋಕ್ಷ ಅನ್ನುತ್ತಾರೆ. ಕರ್ಮಗಳಿಂದ ಆತ್ಮನ ಪೃಥಗ್ಭಾವಕ್ಕೆ (ಬೇರೆಯಾಗುವದಕ್ಕೆ) ದ್ರವ್ಯಮೋಕ್ಷ ಅನ್ನುತ್ತಾರೆ.

ಸುಹಅಸುಹಭಾವಜುತ್ತಾ ಪುಣ್ಣಂ ಪಾವಂ ಹವಂತಿ ಖಲು ಜೀವಾ ॥
ಸಾದಂ ಸುಹಾವು ಣಾಮಂ ಗೋದಂ ಪುಣ್ಣಂ ಪರಾಣಿ ಪಾವಂಚ ॥ ೩೮ ॥

ಅರ್ಥ:—ಶುಭ ಮತ್ತು ಅಶುಭ ಪರಿಣಾಮಗಳಿಂದ ಯುಕ್ತವಾದ ಜೀವಗಳು ಪುಣ್ಯ ಮತ್ತು ಪಾಪ ಇವುಗಳನ್ನು ಅನುವಿಸುತ್ತವೆ. ಅಂದರೆ ಶುಭಪರಿಣಾಮದಿಂದ ಪುಣ್ಯವೂ, ಅಶುಭಪರಿಣಾಮದಿಂದ ಪಾಪವೂ ಸಂಭವಿಸಿ, ಅವುಗಳಿಂದ ಜೀವಗಳು ಸುಖದು:ಖಗಳನ್ನು ಅನುಭವಿಸುತ್ತವೆ. ಸಾತಾವೇದನೀಯ, ಶುಭಆಯು, ಶುಭನಾಮ ಮತ್ತು ಶುಭಗೋತ್ರ ಇವು ಪುಣ್ಯದ ಚಿನ್ಹಗಳಾಗಿವೆ. ಇವುಗಳಿಗೆ ವಿಪರೀತವಾದ ಅಸಾತಾವೇದನೀಯ, ಅಶುಭ ಆಯು, ಅಶುಭ ನಾಮ ಮತ್ತು ನೀಚಗೋತ್ರ ಇವು ಪಾಪದ ಚಿನ್ಹಗಳಾಗಿವೆ.

ಸಮ್ಮದ್ದಂಸಣಣಾಣಂ ಚರಣಂ ಮುಕ್ಖಸ್ಸ ಕಾರಣಂ ಜಾಣೇ ॥
ವವಹಾರಾ ಣಿಚ್ಛಯದೋ ತತ್ತಿಯಮಇಓ ಣಿಓ ಅಪ್ಪಾ ॥ ೩೯ ॥

ಅರ್ಥ:—ವ್ಯವಹಾರನಯದಿಂದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಗ್‌ಚಾರಿತ್ರ ಈ ಮೂರು ಕೂಡಿ, ಮೋಕ್ಷಕ್ಕೆ ಕಾರಣಗಳಾಗುತ್ತವೆ, ಎಂದು ತಿಳಿ. ನಿಶ್ಚಯನಯದಿಂದ ಸಮ್ಯಗ್ದರ್ಶನಜ್ಞಾನಚಾರಿತ್ರಮಯನಾದ ಆತ್ಮನು ಸ್ವತ: ಮೋಕ್ಷಕ್ಕೆ ಕಾರಣನಾಗುತ್ತಾನೆ.

ರಯಣತ್ತಯಂ ನ ವಟ್ಟಇ ಅಪ್ಪಾಣಮುಇತ್ತು ಅಣ್ಣದವಿಅಮ್ಹಿ ॥
ತಮ್ಹಾ ತತ್ತಿಯಮಇಉ ಹೋದಿ ಹು ಮುಕ್ಖಸ್ಸ ಕಾರಣಂ ಆದಾ ॥ ೪೦

ಅರ್ಥ:-ಆತ್ಮನ ಹೊರ್ತು ಉಳಿದ ಯಾವ ದ್ರವ್ಯಗಳಲ್ಲೂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳು ಇರುವದಿಲ್ಲ. ಆದ್ದರಿಂದ ಈ ರತ್ನತ್ರಯವುಳ್ಳ ಆತ್ಮನು ಮೋಕ್ಷಕ್ಕೆ ಕಾರಣನಾಗುತ್ತಾನೆ.

ಜೀವಾದೀಸದ್ದಹಣಂ ಸಮ್ಮತ್ತಂ ರೂವಮಪ್ಪಣೋ ತಂ ತು ॥
ದುರಭಿಣಿವೇಸವಿಮುಕ್ಕಂ ಣಾಣಂ ಸಮ್ಮಂ ಖು ಹೋದಿ ಸದಿ ಜಮ್ಹಿ ॥

ಅರ್ಥ:—ಜೀವಾದಿ ತತ್ವಗಳಲ್ಲಿ ಶ್ರದ್ಧಾನವನ್ನು ಇಡುವದೇ ಸಮ್ಯಗ್ದರ್ಶನವು; ಆತ್ಮನ ಸ್ವರೂಪಮಯವಾಗಿದ್ದು, ಸಮ್ಯಗ್ದರ್ಶನದಿಂದ ದುರಭಿನಿವೇಶ

(ಸಂಶಯು, ವಿಮೋಹ, ಮತ್ತು ಭ್ರಮು,) ರಹಿತವಾದ ಸಮ್ಯಗ್‌ಜ್ಞಾನವು ಪ್ರಾಪ್ತವಾಗುತ್ತತ್ತದೆ.

ಸಂಸಯವಿಮೋಹವಿಬ್ಭಮವಿವಜ್ಜಿಯಂ ಅಪ್ಪಪರಸರೂವಸ್ಸ ॥
ಗಹಣಂ ಸಮ್ಮಣ್ಣಾಣಂ ಸಾಯಾರಮಣೇಯಭೇಯಂ ತು ॥ ೪೨ ॥

ಅರ್ಥ: — ಸಂಶಯು, ವಿಮೋಹ ಮತ್ತು ಭ್ರಮ ಇವುಗಳಿಂದ ರಹಿತವಾದ ಮತ್ತು ಆಕಾರ ಸಹಿತವಾದ ಸ್ವಪರಸ್ವರೂಪದ ಜ್ಞಾನವು ಸಮ್ಯಗ್‌ಜ್ಞಾನವು.

ಜಂ ಸಾಮಣ್ಣಂ ಗಹಣಂ ಭಾವಾಣಂ ಣೇವ ಕಟುಮಾಯಾರಂ ॥
ಅವಿಸೇಸಿದೂಣ ಅಠ್ಠೇ ದಂಸಣಮಿದಿ ಭಣ್ಣಏ ಸಮಏ ॥ ೪೩ ॥

ಅರ್ಥ:—ವಿಶೇಷ ಸ್ವರೂಪವನ್ನು ಗ್ರಹಿಸದೇ, ಪದಾರ್ಥದ ಆಕಾರವನ್ನು ತಿಳಿಯದೇ ಪದಾರ್ಥದ ಸತ್ತೆಯನ್ನು ಅವಲೋಕಿಸುವದು ದರ್ಶನವೆನಿಸುತ್ತದೆ.

ದಂಸಣಪುವ್ವಂ ಣಾಣಂ ಛದಮತ್ಥಾಣಂ ಣ ದೋಣ್ಣಿ ಉವಯೋಗಾ ॥
ಜುಗವಂ ಜಮ್ಹಾ ಕೇವಲಿ–ಣಾಹೇ ಜುಗವಂ ತು ತೇ ದೋವಿ ॥ ೪೪ ॥

ಅರ್ಥ:--ಛದ್ಮಸ್ಥ ಅಂದರೆ ಅಲ್ಪಜ್ಞಾನಿಗಳಾದ (ಯಾರ ಜ್ಞಾನಾವರಣೀಯ ಮತ್ತು ದರ್ಶನಾವರಣೀಯ ಕರ್ಮವು ಸ್ವಲ್ಪ ಉಳಿದಿರುವದು ಅಂಥ) ಮುನಿಗಳಿಗೆ ಜ್ಞಾನೋಪಯೋಗ ಮತ್ತು ದರ್ಶನೋಪಯೋಗ ಇವು ಏಕಕಾಲಕ್ಕೆ ಆಗುವದಿಲ್ಲ. ಅವರಿಗೆ ದರ್ಶನವು ಹುಟ್ಟಿದ ಮೇಲೆ ಜ್ಞಾನವು ಹುಟ್ಟುತ್ತದೆ. ಯಾಕಂದರೆ, ಈ ಎರಡೂ ಉಪಯೋಗಗಳು ಕೇವಲಿಗಳಿಗೆ ಮಾತ್ರ ಒಂದೇಸವನೆ ಆಗುತ್ತವೆ.

ಅಸುಹಾದೋ ವಿಣಿವಿತ್ತಿ ಸುಹೇ ಪವಿತ್ತೀ ಯ ಜಾಣ ಚಾರಿತ್ತಂ ॥
ವದಸಮಿದಿಗುತ್ತಿರೂವಂ ವವಹಾರಣಯಾದು ಜಿಣಭಣಿಯಮ್ ॥ ೪೫ ॥

ಅರ್ಥ— ವ್ಯವಹಾರನಯದಿಂದ, ಅಶುಭ ಕರ್ಮಗಳಿಂದ ಪರಾಙ್ಮುಖನಾಗಿ ಶುಭಕರ್ಮಗಳನ್ನು ಮಾಡುವದಕ್ಕೆ ಚಾರಿತ್ರವೆನ್ನುತ್ತಾರೆ. ವ್ರತ, ಸಮಿತಿ, ಗುಪ್ತಿ ಮುಂತಾದವು ಚಾರಿತ್ರದ ಒಳಭೇದಗಳಿರುತ್ತವೆ. ಹೀಗೆ ಶ್ರೀಜಿನೇಶ್ವರನಿಂದ ಹೇಳಲ್ಪಟ್ಟದೆ.

ಬಹಿರಬ್ಭಂತರಕಿರಿಯಾರೋಹೋ ಭವಕಾರಣಪ್ಪಣಾಸಟ್ಠಂ ॥
ಣಾಣಿಸ್ಸ ಜಂ ಜಿಣುತ್ತಂ ತಂ ಪರಮಂ ಸಮ್ಮಚಾರಿತ್ತಂ ॥ ೪೬ ॥

ಅರ್ಥ:—ಸಂಸಾರದ ಬೀಜವನ್ನು ನಾಶಗೊಳಿಸುವದಕ್ಕಾಗಿ ಜ್ಞಾನಿಗಳು ಬಾಹ್ಯಾಭ್ಯಂತರ ಕ್ರಿಯೆಗಳನ್ನು ತ್ಯಾಗ ಮಾಡುತ್ತಾರೆ. ಇದು ಶ್ರೀಜಿನೇಶ್ವರನಿಂದ ನಿಶ್ಚಯಚಾರಿತ್ರವೆಂದು ಹೇಳಲ್ಪಟ್ಟದೆ.

ದುವಿಹಂ ಪಿ ಮುಖಹೇಉಂ ಜ್ಝಾಣೇ ಪಾಊಣದಿ ಜಂ ಮುಣೀ ಣಿಯಮಾ ॥
ತಮ್ಹಾ ಪಯತ್ತಚಿತ್ತಾ ಜೂಯಂ ಜ್ಝಾಣಂ ಸಮಬ್ಭಸಹ ॥ ೪೭ ॥

ಅರ್ಥ:—ಮೋಕ್ಷಕ್ಕೆ ಕಾರಣವಾದ ಅಂತರ್ಬಾಹ್ಯಗಳೆಂಬ ಭೇದದಿಂದ ಎರಡು ಪ್ರಕಾರದ ಚಾರಿತ್ರವು ಮುನೀಶ್ವರರಿಗೆ ಜ್ಞಾನದಿಂದ ಖಂಡಿತವಾಗಿ ಪ್ರಾಪ್ತವಾಗುತ್ತದೆ. ಆದ್ದರಿಂದ ನೀವು ಮನೋನಿಗ್ರಹ ಮಾಡಿ, ಜ್ಞಾನದ ಅಭ್ಯಾಸವನ್ನು ಮಾಡಿರಿ.

ಮಾ ಮುಜ್ಝಹ ಮಾ ರಜ್ಜಹ ಮಾ ದೂಸಹ ಇಟ್ಠನಿಟ್ಠಅಟ್ಠೇಸು ॥
ಥಿರಮಿಚ್ಛಹಿ ಜಇ ಚಿತ್ತಂ ವಿಚಿತ್ತ ಜ್ಝಾಣಪ್ಪಸಿದ್ಧೀಏ ॥ ೪೮ ॥

ಅರ್ಥ:—ಭವ್ಯರೇ, ಧ್ಯಾನದಲ್ಲಿ ಅನೇಕ ಭೇದಗಳುಂಟು. ಧ್ಯಾನವನ್ನು ಸಾಧಿಸುವದಕ್ಕೆ ನೀವು ಇಷ್ಟಾನಿಷ್ಟ ವಸ್ತುಗಳಲ್ಲಿ ರಾಗದ್ವೇಷಗಳನ್ನು ಬಿಡಿರಿ. ಮತ್ತು ಮನಸನ್ನೂ ನಿಗ್ರಹಿಸರಿ.

ಪಣತೀಸಸೋಲಛಪ್ಪಣಚಉದುಗಮೇಗಂ ಚ ಜವಹಜ್ಝಾಏಹ ॥
ಪರಮೇಟ್ಠಿವಾಚಯಾಣಂ ಅಣ್ಣಂ ಚ ಗುರೂವಏಸೇಣ ॥ ೪೯ ॥

ಅರ್ಥ:—೩೫, ೧೬, ೬, ೫, ೪, ೨, ೧, ಹೀಗೆ ಕ್ರಮದಿಂದ ಇಷ್ಟಿಷ್ಟು ಅಕ್ಷರವುಳ್ಳ ಪರಮೇಷ್ಠಿವಾಚಕ * ಮಂತ್ರವನ್ನು ನೀವು ಜಪಿಸರಿ; ಮತ್ತು ಧ್ಯಾನಿಸರಿ. ಇದರ ಹೊರ್ತು (ಸಿದ್ಧಚಕ್ರ ಮುಂತಾದ) ಮಾತ್ರ ಭೇದಗಳನ್ನು ಗುರುಗಳ ಉಪದೇಶದಿಂದ ತಿಳಿದುಕೊಳ್ಳಿರಿ.

---

* (೧) ಮೂವತ್ತೈದು ಅಕ್ಷರಗಳ ಮಂತ್ರವು.

ಣಮೋ ಅರಹಂತಾಣಂ । ಣಮೋ ಸಿದ್ಧಾಣಂ । ಣಮೋ ಆಯರಿಯಾಣಂ ।
ಣಮೋ ಉವಜ್ಝಾಯಾಣಂ । ಣಮೋ ಲೋಏಸವ್ವಸಾಹೂಣಂ ॥ ೧ ॥

೧ ಹದಿನಾರು ಅಕ್ಷರಗಳ ಮಂತ್ರವು:—ಅರಹಂತ ಸಿದ್ಧ ಆಯರಿಯಾ ಸಾಹು ॥

೨ ಆರು ಅಕ್ಷರಗಳ ೩ ಮಂತ್ರಗಳು:—ಅರಹಂತ ಸಿದ್ಧಾ ಅಥವಾ ಅರಹಂತ ಸಿಸಾ ಅಥವಾ ಓಂ ನಮಃ ಸಿದ್ಧೇಭ್ಯಃ ॥

ಣಟ್ಠಚದುಘಾಇಕಮ್ಮೋ ದಂಸಣಸುಹಣಾಣವೀರಿಯಮಈಓ ॥
ಸುಹದೇಹತ್ಥೋ ಅಪ್ಪಾ ಸುದ್ಧೋ ಅರಿಹೋ ವಿಚಿಂತಿಜ್ಜೋ ॥ ೫೦ ॥

ಅರ್ಥಃ—ನಾಲ್ಕು ಘಾತಿಕರ್ಮಗಳನ್ನು ಕೆಡಿಸಿದಂಥ ಮತ್ತು ಅದರಿಂದಲೇ ಅನಂತದರ್ಶನ, ಅನಂತಸುಖ, ಅನಂತಜ್ಞಾನ ಮತ್ತು ಅನಂತವೀರ್ಯ ಇವುಗಗಳನ್ನು ಪಡೆದಂಥ ಮತ್ತು (ಸಪ್ತಧಾತು ಮಲರಹಿತ) ಶುಭದೇಹವುಳ್ಳಂಥ ಶುದ್ಧಾತ್ಮನಾದ ಅರಹಂತಪರಮೇಷ್ಠಿಯು ಧ್ಯಾನಿಸಲಿಕ್ಕೆ ಯೋಗ್ಯನಿರುವನು.

ಣಟ್ಠಟ್ಠಕಮ್ಮದೇಹೋ ಲೋಯಾಲೋಯಸ್ಸ ಜಾಣಓ ದಟ್ಠಾ ॥
ಪುರಿಸಾಯಾರೋ ಅಪ್ಪಾ ಸಿದ್ಧೋ ಜ್ಝಾಏಹ ಲೋಯಸಿಹರತ್ಥೋ ॥ ೫೧ ॥

ಅರ್ಥಃ—ಎಂಟು ಕರ್ಮಗಳನ್ನು ಕೆಡಿಸಿದಂಥ, ದೇಹರಹಿತನಾದ, ಲೋಕಾಲೋಕವನ್ನು ನೋಡುವಂಥ ಮತ್ತು ತಿಳಿಯುವಂಥ ಪುರುಷ ಆಕಾರವುಳ್ಳ ಮತ್ತು ತ್ರೈಲೋಕ್ಯಶಿಖರದ ಮೇಲೆ ವಾಸಿಸುವಂಥ ಶುದ್ಧಾತ್ಮನು ಸಿದ್ಧಪರಮೇಷ್ಠಿಯು; ಅವನನ್ನು ಧ್ಯಾನಿಸಿರಿ.

ದಂಸಣಣಾಣಪಹಾಣೇ ವೀರಿಯಚಾರಿತ್ತವರತವಾಯಾರೇ ॥
ಅಪ್ಪಂ ಪರಂ ಚ ಜುಂಜಇ ಸೋ ಆಯರಿಓ ಮುಣೀ ಜ್ಝೇಓ ॥ ೫೨ ॥

ಅರ್ಥಃ—ದರ್ಶನಾಚಾರ, ಜ್ಞಾನಾಚಾರ, ವೀರ್ಯಾಚಾರ, ಚಾರಿತ್ರಾಚಾರ

---

೩ ಐದು ಅಕ್ಷರಗಳ ಮಂತ್ರವು:—ಅ ಸಿ ಆ ಉ ಸಾ. ॥
೪ ನಾಲ್ಕು ಅಕ್ಷರಗಳ ೨ ಮಂತ್ರಗಳು:—ಅರಹಂತ ಅಥವಾ ಅ ಸಿ ಸಾಹೂ ॥
೫ ಎರಡು ಅಕ್ಷರಗಳ ೩ ಮಂತ್ರಗಳು:—ಸಿದ್ಧ । ಅಸಾ । ಓಂ ಹ್ರೀಂ ॥
೬ ಒಂದು ಅಕ್ಷರದ ಮಂತ್ರವುಃ—ಓಂ ॥ ಯಥಾ ಆರ್ಯಾಛಂದ:—

ಅರಹಂತಾ ಅಸರೀರಾ ಆಯರಿಯಾ ತಹ ಉವಜ್ಝಯಾ ಮುಣಿಣೋ ॥
ಪಢಮಕ್ಖರಣಿಪ್ಪಣ್ಣೋಂಕಾರೋ ಯಂ ಪಂಚಪರಮೇಠ್ಠೀ ॥ ೧ ॥

ಭಾವಾರ್ಥ:—ಅರಹಂತನ ಮೊದಲನೇ ಅಕ್ಷರವು 'ಅ', ಅಶರೀರೀ (ಸಿದ್ಧ)ನ ಮೊದಲನೇ ಅಕ್ಷರವು 'ಅ', ಆಚಾರ್ಯನ ಮೊದಲನೇ ಅಕ್ಷರವು 'ಆ', ಉಪಾಧ್ಯಾಯನ ಮೊದಲನೇ ಅಕ್ಷರವು 'ಉ', ಮುನಿಯ (ಸಾಧು) ಮೊದಲನೇ ಅಕ್ಷರವು 'ಮ್' ಈ ಮೇರೆಗೆ ಅ+ಅ+ಆ+ಉ+ಮ್ ಈ ಐದು ಅಕ್ಷರಗಳ ವ್ಯಾಕರಣದ ನಿಯಮಾನುಸಾರವಾಗಿ ಸಂಧಿಮಾಡಲು ಪಂಚಪರಮೇಷ್ಠಿವಾಚಕ 'ಓಮ್' ಅಥವಾ 'ಓಂ' ಎಂಬ ಅಕ್ಷರವು ಸಿದ್ಧವಾಗಿರುತ್ತದೆ.

ಮತ್ತು ತಪಾಚಾರ ಈ ಐದು ಆಚಾರಗಳಲ್ಲಿ ತಾನು ಪ್ರವರ್ತಿಸಿ, ಪರರನ್ನು ಪ್ರವರ್ತಿಸುವಂಥ ಮುನಿಯು ಆಚಾರ್ಯಪರಮೇಷ್ಠಿಯು; ಅವನನ್ನು ಧ್ಯಾನಿಸಿರಿ.

ಜೋ ರಯಣತ್ತಯಜುತ್ತೋ ಣಿಚ್ಚಂ ಧಮ್ಮೋವದೇಸಣೇ ಣಿರದೋ ||
ಸೋ ಉವಜ್ಝಾಓ ಅಪ್ಪಾ ಜದಿವರವಸಹೋ ಣಮೋ ತಸ್ಸ || ೫೩ ||

ಅರ್ಥಃ—ರತ್ನತ್ರಯಗಳಿಂದ ಯುಕ್ತನಾಗಿ, ಯಾವಾಗಲೂ ಧರ್ಮೋಪದೇಶವನ್ನು ಮಾಡುವಂಥ ಶುದ್ಧಾತ್ಮನಾದ ಯತಿಶ್ರೇಷ್ಠನು ಉಪಾಧ್ಯಾಯ ಪರಮೇಷ್ಠಿಯು; ಅವನನ್ನು ನಮಸ್ಕರಿಸುತ್ತೇನೆ.

ದಂಸಣಣಾಣಸಮಗ್ಗಂ ಮಗ್ಗಂ ಮೋಕ್ಖಸ್ಸ ಜೋ ಹು ಚಾರಿತ್ತಂ ||
ಸಾಧಯದಿ ಣಿಚ್ಚ ಸುದ್ಧಂ ಸಾಹೂ ಸಹ ಮುಣೀ ಣಮೋ ತಸ್ಸ ||

ಅರ್ಥ:— ಸಮ್ಯಗ್ದರ್ಶನ-ಜ್ಞಾನದಿಂದ ಕೂಡಿದಂಥ ಮತ್ತು ಮೋಕ್ಷಕ್ಕೆ ಕಾರಣವಾದಂಥ ಶುದ್ಧವಾದ ಚಾರಿತ್ರವನ್ನು ಪಡಕೊಳ್ಳುವಂಥ ಮುನಿಯು ಸಾಧು ಪರಮೇಷ್ಠಿಯು; ಅವರಿಗೆ ನಮಸ್ಕಾರವು.

ಜಂ ಕಿಂಚಿವಿ ಚಿಂತಂತೋ ಣಿರೀಹವಿತ್ತೀ ಹವೇ ಜದಾ ಸಾಹೂ ||
ಲದ್ಧೂಣಯ ಏಯತ್ತಂ ತದಾಹು ತಂ ತಸ್ಸ ಣಿಚ್ಛಯಂ ಜ್ಝಾಣಂ ||

ಅರ್ಥಃ—ಸಾಧುಪರಮೇಷ್ಠಿಯು ಏಕತ್ವವನ್ನು ಹೊಂದಿ, ಅಂದರೆ ಕಾಯಿಕ, ವಾಚಿಕ, ಮಾನಸಿಕ ಕ್ರಿಯೆಗಳನ್ನು ಬಿಟ್ಟು, ಬಾಹ್ಯಾಭ್ಯಂತರ ಪರಿಗ್ರಹವಿಷಯದಲ್ಲಿ ನಿರಿಚ್ಛನಾಗಿ, ದ್ರವ್ಯರೂಪ ಅಥವಾ ಪರ್ಯಾಯರೂಪ ವಸ್ತುಗಳನ್ನು ಧ್ಯಾನಿಸುತ್ತಾನೆ. ಆ ಧ್ಯಾನವು ನಿಶ್ಚಯಧ್ಯಾನವೆನಿಸುತ್ತದೆ.

ಮಾ ಚಿಟ್ಠಹ ಮಾ ಜಂಪಹ ಮಾ ಚಿಂತಹ ಕಿಂವಿ ಜೇಣ ಹೋಇಥಿರೋ ||
ಅಪ್ಪಾ ಅಪ್ಪಮ್ಮಿ ರಓ ಇಣಮೇವ ಪರಂ ಹವೇ ಜ್ಝಾಣಂ || ೫೬ ||

ಅರ್ಥ:—ಭವ್ಯರೇ, ನೀವು ಎಲ್ಲ ಚೇಷ್ಟೆಗಳನ್ನೂ ಜಲ್ಪಿಸುವದನ್ನೂ ವಿಚಾರಗಳನ್ನೂ ಬಿಟ್ಟು, ಆತ್ಮನಲ್ಲಿ ಆತ್ಮನು ಸ್ಥಿರವಾಗಿ ಅನುರಕ್ತವಾಗುವಂತೆ ಧ್ಯಾನವನ್ನು ಮಾಡಿರಿ; ಇದೇ ಉತ್ತಮ ಧ್ಯಾನವು.

ತವಸುದವದವಂ ಚೇದಾ ಜ್ಝಾಣರಹಧುರಂಧರೋ ಹವೇ ಜಮ್ಹಾ ||
ತಮ್ಹಾ ತತ್ತಿಯಣಿರದಾ ತಲ್ಲದ್ಧೀಏ ಸದಾ ಹೋಹ || ೫೭ ||

ಅರ್ಥಃ—ತಪ, ಶಾಸ್ತ್ರ ಮತ್ತು ವ್ರತವನ್ನು ಪಾಲಿಸುವಂಥ ಆತ್ಮನು ಧ್ಯಾನ

ವೆಂಬ ರಥವನ್ನು ಎಳೆಯುವದಕ್ಕೆ ಯೋಗ್ಯನಾಗುತ್ತಾನೆ. ಆದದರಿಂದ ಭವ್ಯರೆ, ನೀವು ರತ್ನತ್ರಯದ ಅಥವಾ ಪರಮಾತ್ಮಪದದ ಪ್ರಾಪ್ತಿಯಗೋಸ್ಕರ ತಪ, ಶಾಸ್ತ್ರ ಮತ್ತು ವ್ರತ ಇವುಗಳಲ್ಲಿ ಲೀನರಾಗಿರಿ.

ದವ್ವಸಂಗಹಮಿಣಂ ಮುಣಿಣಾಹಾ ।
ದೋಸಸಂಚಯಚುದಾ ಸುದಪುಣ್ಣಾ ॥
ಸೋಧಯಂತು ತಣುಸುತ್ತಧರೇಣ ।
ಣೇಮಿಚಂದಮುಣಿಣಾ ಭಣಿಯಂ ಜಂ ॥ ೫೮ ॥

ಅರ್ಥಃ—ನಿರ್ದೋಷ ಮತ್ತು ಶಾಸ್ತ್ರಪಾರಂಗತರಾದ ಮುನಿಶ್ರೇಷ್ಠರೆ, ಆಗಮ ಶಾಸ್ತ್ರದಲ್ಲಿ ಅಲ್ಪಮತಿಯುಳ್ಳ ನೇಮಿಚಂದ್ರಮುನಿಯಿಂದ ಹೇಳಲ್ಪಟ್ಟ ಈ ದ್ರವ್ಯ ಸಂಗ್ರಹವನ್ನು ನೀವು ಶೋಧಿಸರಿ.

ಸಮಾಪ್ತ:

॥ ಶ್ರೀವೀತರಾಗಾಯ ನಮಃ ॥

ಕ್ರಯಕ್ಕೆ ದೊರೆಯುವ

ಜೈನಧರ್ಮದ ಗ್ರಂಥಗಳು.

ಜಿಜ್ಜಣರಾಯ ಪುರಾಣ	೧ ರು.
ಅಕಲಂಕ ಸ್ತೋತ್ರ ಹಾಗು ಚರಿತ್ರೆ.	೨ ಆ.
ದ್ರವ್ಯಸಂಗ್ರಹ.	೩ ಆ.
ಪ್ರಶ್ನೋತ್ತರಮಾಣಿಕ್ಯಮಾಲಾ.	೬ ,,
ಶ್ರೀಸಮಂತಭದ್ರಸ್ವಾಮಿಕೃತ ರತ್ನಕರಂಡಶ್ರಾವಕಾಚಾರವು.	೫ ,,
ಶ್ರೀಪದ್ಮನಂದಿಸ್ವಾಮಿಕೃತ ಶ್ರಾವಕಾಚಾರವು.	೨ ,,
ಪೂಜ್ಯಪಾದಸ್ವಾಮಿಕೃತ ಉಪಾಸಕಾಚಾರವು.	೩ ,,
ಮೃತ್ಯುಮಹೋತ್ಸವಃ	೧ ,,
ದಶಲಕ್ಷಣಧರ್ಮ	೪ ಆ.
ಜೈನಧರ್ಮಾಮೃತಸಾರ.	೨ ಆ.
ಭಕ್ತಾಮರಸ್ತೋತ್ರವು.	೬ ಪೈ.
ಬಾಲಕರನ್ನು ತಿದ್ದುವಿಕೆ.	೬ ಪೈ.
ಅಹಿಂಸೆ.	೬ ಪೈ.
ಸತ್ಯವ್ರತ.	೬ ಪೈ.

ಪುಸ್ತಕಗಳನ್ನು ಬೇಡುವವರು ತಮ್ಮ ಹೆಸರು, ಅಡ್ಡಹೆಸರು, ಊರು, ತಾಲೂಕು, ಜಿಲ್ಹಾ, ಪೋಸ್ಟ ಮುಂತಾದವುಗಳನ್ನು ಸುವಾಚ್ಯ ಅಕ್ಷರಗಳಿಂದ ಚನ್ನಾಗಿ ತಿಳಿಯುವಂತೆ ಬರೆಯಬೇಕು.

ಕ್ರಯದ ಹೊರ್ತು ವ್ಹಿ. ಪಿ. ಚಾರ್ಜು ಬೇರೆ ಬೀಳುವದು.

ಅಣ್ಣಪ್ಪಾ ಚೌಗುಲೆ ವಕೀಲ.

ಶ್ರೀಮಹಾವೀರ ಪ್ರೇಸ್ ಬೆಳಗಾವಿ,